ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮೇ 18, 2024

ಸಂಪುಟ : 51 ಸಂಚಿಕೆ : 04 ☎ 08192-254736 91642 99999 RNI No: 27369/75 ಪುಟ : 6 ರೂ : 5.00 www.janathavani.com janathavani@mac.com



THE TEAM ACADEMY

LONG TERM NEET 2025
BATCH STARTS ON 6TH JUNE 2024

Introducing JEE-LONG TERM
BATCH STARTS ON 6TH JUNE 2024

NEET 2024
Expected Scores
100+
Medical Seats
Expected



600 Above 38 Students
500 Above 100 Students
661 Akash B B | 680 Tejas T | 690 Pakkiresh T | 665 Harsha Vardhan | 653 Mahesh N P

Davangere : 9035109411, 9900565795, 9538546758
Shivamogga : 9902303441, 9963505593, 9591319279


## ಅಂಜಲಿ ಕೊಲೆ ಆರೋಪಿ ದಾವಣಗೆರೆಯಲ್ಲಿ ಸೆರೆ

**ಮಾಯಕೊಂಡ ಬಳಿ ರೈಲಿನಲ್ಲಿ ಮಹಿಳೆಗೆ ಚಾಕು ಇರಿದ ಆರೋಪಿ ಗಿರೀಶ ಸಾವಂತ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಚಿಗಟೇರಿ ಜಿಲ್ಲಾಸ್ಪತ್ರೆ ಸೇರಿ, ಪೊಲೀಸರ ಅತಿಥಿಯಾದ**

ದಾವಣಗೆರೆ, ಮೇ 17- ಹುಬ್ಬಳ್ಳಿಯಲ್ಲಿ ಅಂಜಲಿ ಎಂಬ ಯುವತಿಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಗಿರೀಶ್ ಸಾವಂತನನ್ನು ಗುರುವಾರ ತಡರಾತ್ರಿ ದಾವಣಗೆರೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನಿಂದ ಬೆಳಗಾವಿಗೆ ದಾವಣಗೆರೆ ಮಾರ್ಗವಾಗಿ ತೆರಳುತ್ತಿದ್ದ ವಿಶ್ವಮಾನವ ರೈಲಿನಲ್ಲಿ ಬರುತ್ತಿದ್ದ ಗಿರೀಶ್, ಮಾಯಕೊಂಡದ ಬಳಿ ಶೌಚಾಲಯಕ್ಕೆ ತೆರಳಿದ್ದ ಗದಗ ಜಿಲ್ಲೆಯ ಮುಳಗುಂದ ನಿವಾಸಿ ಲಕ್ಷ್ಮೀ ಅವರೊಂದಿಗೆ ಕಿರಿಕ್ ಮಾಡಿ ಚಾಕು ಹಾಕಲು ಯತ್ನಿಸಿದ್ದಾನೆ. ಈ ವೇಳೆ ಮಹಿಳೆಗೆ ಗಾಯವಾಗಿದ್ದು, ಮಹಿಳೆಯ ಸಂಬಂಧಿಕರು ಹಾಗೂ ಸಹ ಪ್ರಯಾಣಿಕರು ಗಿರೀಶ್‌ನಿಗೆ ಥಳಿಸಿದ್ದಾರೆ ಎನ್ನಲಾಗಿದೆ.

ಆರೋಪಿಯು ಮಾಯಕೊಂಡ ಸಮೀಪ ಚಲಿಸುವ ರೈಲಿನಿಂದ ಕೆಳಗೆ ಜಿಗಿದು ಹಳಿ ಪಕ್ಕ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದಾನೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿ, ಆಂಬ್ಯುಲೆನ್ಸ್ ಮೂಲಕ ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ (5ನೇ ಪುಟಕ್ಕೆ)

## ಬೆಳೆಗಳಿಗೆ ಅತಿ ಕ್ರಿಮಿನಾಶಕ ಬಳಕೆ

**ಕೇಂದ್ರಕ್ಕೆ ನೋಟಿಸ್**

ನವದೆಹಲಿ, ಮೇ 17 – ಆಹಾರ ಬೆಳೆಗಳು ಹಾಗೂ ಆಹಾರ ವಸ್ತುಗಳಲ್ಲಿ ಕ್ರಿಮಿನಾಶಕಗಳ ಬಳಕೆ ಅತಿಯಾಗಿದ್ದು, ಇದರಿಂದ ಸಾವುಗಳು ಸಂಭವಿಸುತ್ತಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಬಗ್ಗೆ ಉತ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಲಾಗಿದೆ. (5ನೇ ಪುಟಕ್ಕೆ)

## ವಾಯುವ್ಯದಲ್ಲಿ ತೀವ್ರ ತಾಪಮಾನ

ನವದೆಹಲಿ, ಮೇ 17 – ದೇಶದ ವಾಯುವ್ಯ ಭಾಗದಲ್ಲಿ ತಾಪಮಾನ ತೀವ್ರ ಏರಿಕೆ ಕಂಡಿದೆ. ದೆಹಲಿ ನಜಾಫ್‌ಘಡದಲ್ಲಿ 47.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ರಾಜಸ್ಥಾನದ 19 ಕಡೆಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದೆ. ಹರಿಯಾಣದ 18, ದೆಹಲಿಯ 8 ಹಾಗೂ ಪಂಜಾಬ್‌ನ 2 ಕಡೆ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ (5ನೇ ಪುಟಕ್ಕೆ)

## ರಾಮಕೃಷ್ಣ ಹೆಗಡೆ ನಗರದ ಜನರಿಗೆ ಮತ್ತೆ ಸಂಕಷ್ಟ

**ಮಳೆ - ಗಾಳಿಗೆ ಕುಸಿದ ಶೆಡ್‌ಗಳು, ಹೆಗಡೆ ನಗರದಲ್ಲೇ ಇರುತ್ತೇವೆ ಎಂದು ಪಟ್ಟು**

**ರಿಂಗ್ ರಸ್ತೆ ಜಾಗದಲ್ಲಿ ಶೆಡ್ ಕಟ್ಟಿಕೊಳ್ಳಲು ಸಿದ್ಧತೆ**

ದಾವಣಗೆರೆ, ಮೇ 17 – ರಾಮಕೃಷ್ಣ ಹೆಗಡೆ ನಗರದಿಂದ ಸ್ಥಳಾಂತರಗೊಂಡವರ ತಾತ್ಕಾಲಿಕ ಮನೆಗಳು ಮಳೆಯಿಂದ ನೆಲಕಚ್ಚಿದ್ದು, ಜನರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ.

ಇದರಿಂದ ಆಕ್ರೋಶಗೊಂಡ ಜನರು, ನಮಗೆ ಶಾಶ್ವತವಾದ ಮನೆ ಕಟ್ಟಿಕೊಡುವವರೆಗೂ ರಾಮಕೃಷ್ಣ ಹೆಗಡೆ ನಗರದಲ್ಲೇ ಉಳಿದುಕೊಳ್ಳುವುದಾಗಿ ಹೇಳಿ, ಅಲ್ಲೇ ತಾತ್ಕಾಲಿಕ ಶೆಡ್ ಕಟ್ಟಿಕೊಳ್ಳಲು ಆರಂಭಿಸಿದ್ದಾರೆ.

ರಿಂಗ್ ರಸ್ತೆ ನಿರ್ಮಾಣಕ್ಕಾಗಿ ರಾಮಕೃಷ್ಣ ಹೆಗಡೆ ನಗರದಿಂದ ದೊಡ್ಡಬಾತಿ ಬಳಿ ಜನರನ್ನು ಸ್ಥಳಾಂತರಗೊಳಿಸಲಾಗಿತ್ತು. ಆದರೆ, ತಾತ್ಕಾಲಿಕ ಶೆಡ್‌ಗಳು ಮಳೆ ಹಾಗೂ ಗಾಳಿಗೆ ಸಿಲುಕಿ ಹಾನಿಗೀಡಾಗಿವೆ. ಇದರಿಂದಾಗಿ ಸುಮಾರು 450 ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. (5ನೇ ಪುಟಕ್ಕೆ)



### ನಾಳೆ ನಡೆಯಬೇಕಿದ್ದ ಕಲ್ಲಳ್ಳಿ ನಾಗರಾಜ್ ಕೈಲಾಸ ಸಮಾರಾಧನೆ 23ಕ್ಕೆ ಮುಂದೂಡಿಕೆ



43ನೇ ವಾರ್ಡಿನ ನಗರ ಪಾಲಿಕೆ ಸದಸ್ಯರೂ ಆದ ನಮ್ಮ ಸಹೋದರ
**ಶ್ರೀ ಕಲ್ಲಳ್ಳಿ ನಾಗರಾಜ್ ಶಾಮನೂರು**
ಅವರ ಕೈಲಾಸ ಸಮಾರಾಧನೆ ಕಾರ್ಯಕ್ರಮ ದಿನಾಂಕ 19ರಂದು ನಿಗದಿಯಾಗಿತ್ತು.
ಕಾರಣಾಂತರದಿಂದ ಕೈಲಾಸ ಸಮಾರಾಧನೆಯನ್ನು ದಿನಾಂಕ 23.05.2024ರ ಗುರುವಾರಕ್ಕೆ ಮುಂದೂಡಲಾಗಿದೆ.
ಕಲ್ಲಳ್ಳಿ ರಾಮಚಂದ್ರಪ್ಪ ಮತ್ತು ಸಹೋದರರು, ಶಾಮನೂರು
ಮೊಬೈಲ್ : 78927-99625


|| ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ || || ಶ್ರೀ ಆಂಜನೇಯ ಪ್ರಸನ್ನ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ||, ಜಿಲ್ಲೆ
ಶಿರಮಗೊಂಡನಹಳ್ಳಿ ಗ್ರಾಮದ ವಾಸಿ
**ಶ್ರೀ ಕರಿಯಪ್ಪ ಭೀಮಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 6.5.2024ನೇ ಸೋಮವಾರ ಬೆಳಿಗ್ಗೆ 11.45ಕ್ಕೆ ನನ್ನ ಅಣ್ಣನವರಾದ
**ಕರಿಯಪ್ಪ ಶ್ರೀ ವಾಮದೇವಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 18.5.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ನಾಗನೂರು ಗ್ರಾಮದ ದಿವಂಗತರ ಪುತ್ರಿ ಕುಂಬಳೂರು ಸೂರಪ್ಪ ಶ್ರೀಮತಿ ಚಂದ್ರಮ್ಮ ಶ್ರೀ ಮಹೇಶ್ವರಪ್ಪನವರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಮೃತರ ಮಕ್ಕಳಾದ : ಶ್ರೀಮತಿ ಕವಿತ, ಶ್ರೀ ಬಸವರಾಜ್ ಮತ್ತು ಮಕ್ಕಳು, ಶಿರಮಗೊಂಡನಹಳ್ಳಿ.
ಶ್ರೀಮತಿ ಚಂದ್ರಮ್ಮ ಶ್ರೀ ಮಹೇಶ್ವರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ನಾಗನೂರು ಮತ್ತು ಕರಿಯಪ್ಪ ವಂಶಸ್ಥರು, ಗ್ರಾಮಸ್ಥರು, ಶಿರಮಗೊಂಡನಹಳ್ಳಿ ಹಾಗೂ ಬಂಧು-ಮಿತ್ರರು. ಫೋ. :8880340838, 8861883285
ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಯರಗುಂಟೆ ರುದ್ರೇಶ್ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ವಾಸಿ
**ಶ್ರೀ ಯರಗುಂಟೆ ರುದ್ರೇಶ್ (YR) (63)**
ಇವರು ದಿ. 17.05.2024ರ ಗುರುವಾರ ರಾತ್ರಿ 8.30ಕ್ಕೆ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 18.05.2024ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
96635 08978, 83102 94093

### ಚಿರಸ್ಮರಣೆ







**ಲಿಂ|| ಶ್ರೀ ಹೆಚ್.ಎಮ್. ಷಡಾಕ್ಷರಯ್ಯ**
ಲಿಂಗೈಕ್ಯ : 18.05.2016
ಹಳೇಬಾತಿ, ದಾವಣಗೆರೆ.
ನೀವು ನಮ್ಮನ್ನು ಅಗಲಿ ಎಂಟು ವರ್ಷಗಳಾದವು.
ಅಜಾತ ಶತ್ರು, ಸರಳ ಸಜ್ಜನ, ಸಹೃದಯಿ, ಸದಾ ಹಸನ್ಮುಖಿಯಾದ ನೀವು, ಚೈತನ್ಯ ರೂಪದಲ್ಲಿ ಸದಾ ನಮ್ಮೊಂದಿಗೆ ಇದ್ದೀರಿ. ನೀವು ಇಟ್ಟ ನ್ಯಾಯದ, ನಿಸ್ವಾರ್ಥದ ಹೆಜ್ಜೆ ಗುರುತುಗಳೇ ನಮಗೆ ದಾರಿದೀಪವಾಗಿವೆ. ನಿಮ್ಮ ಕ್ರಿಯಾಶೀಲ ಬದುಕು ಮತ್ತು ಸಹಾಯ ಮನೋಭಾವ ಎಂದೆಂದಿಗೂ ನಮಗೆ ಸ್ಫೂರ್ತಿದಾಯಕವಾಗಿದೆ. ನಿಮ್ಮನ್ನು ತಂದೆಯಾಗಿ ಪಡೆದ ನಾವುಗಳೇ ಪುಣ್ಯವಂತರು. ನೀವು ಬಸವಣ್ಣನ ವಚನದಂತೆ 'ಕಾಯಕವೇ ಕೈಲಾಸ' ಎಂದು ಬದುಕಿ ತೋರಿಸಿಕೊಟ್ಟಿದ್ದೀರಿ. ನಮ್ಮೊಳಗೆ ನೀವು ನೀರು, ಗಾಳಿ ಮತ್ತು ಬೆಳಕಿನಂತೆ ಸದಾ ಜೀವಂತವಾಗಿರುತ್ತೀರಿ. ನಿಮ್ಮ ಸ್ಮರಣೆಯೇ ನಮಗೆ ಇಷ್ಟಲಿಂಗದ ಪೂಜೆಯಿದ್ದಂತೆ.
ಇಂತಿ ನಿಮ್ಮ ನೆನಪುಗಳೊಂದಿಗೆ ✦ ಶ್ರೀಮತಿ ಗೌರಮ್ಮ ಷಡಾಕ್ಷರಯ್ಯ
✦ ಶ್ರೀಮತಿ ರಾಜೇಶ್ವರಿ ಮತ್ತು ಬಾತಿ ವಿಶ್ವನಾಥ್, ಕಾರ್ಯದರ್ಶಿ, ತರಳಬಾಳು ಕೇಂದ್ರ, ಆರ್.ಟಿ. ನಗರ, ಬೆಂಗಳೂರು.
✦ ಶ್ರೀಮತಿ ಉಷಾ ಮತ್ತು ಬಾತಿ ಸತೀಶ್
✦ ಶ್ರೀಮತಿ ಶಶಿಕಲಾ ಮತ್ತು ಗುರುಪಾದಪ್ಪ, ಮಾಗೋಡು.
✦ ಶ್ರೀಮತಿ ಸರಿತಾ ಮತ್ತು ಸತೀಶ್, ಬೆಂಗಳೂರು.
✦ ಹೆಚ್.ಎಮ್. ಮರುಳಸಿದ್ದಯ್ಯ ಮತ್ತು ಸಹೋದರರು
ಹಾಗೂ ಅಕ್ಕ-ತಂಗಿಯರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಹಳೇಬಾತಿ ಗ್ರಾಮಸ್ಥರು.
SURYA BUILT ON VALUES
ಸೂರ್ಯ ಡೆವಲಪರ್ಸ್, ಬೆಂಗಳೂರು

### ಜನ್ಮ ದಿನದ ಶುಭಾಶಯಗಳು





ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ದಾವಣಗೆರೆ ಮಹಾನಗರ ಪಾಲಿಕೆಯ ಮಹಾಪೌರರು,
ದಾವಣಗೆರೆ ಜಿಲಾ ವಾಲ್ಮೀಕಿ ಯುವ ಘಟಕದ ಅಧ್ಯಕ್ಷರೂ ಆದ ಯುವ ನೇತಾರ
**ಶ್ರೀ ವಿನಾಯಕ ಪೈಲ್ವಾನ್**
ಅವರಿಗೆ ಹಾರ್ದಿಕ ಶುಭಾಶಯಗಳು.
ಭಗವಂತ ಶ್ರೀಯುತರಿಗೆ ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುವ..
**ಹೊಂಡದ ಸರ್ಕಲ್ ಗೆಳೆಯರ ಬಳಗ, ದಾವಣಗೆರೆ**

## ಎನ್.ಟಿ. ಎರ್ರಿಸ್ವಾಮಿ ಅವರ 'ಬ್ಯಾಂಕಾಯಣ' ಕೃತಿ ಲೋಕಾರ್ಪಣೆ




ಬೆಂಗಳೂರು, ಮೇ 17- ಕಷ್ಟದಲ್ಲಿ ಇರುವ ವ್ಯಕ್ತಿಗೆ ಸಹಾಯ ಮಾಡುವುದರಿಂದ ಬದುಕಿನಲ್ಲಿ ಸಂತೋಷ ಹಾಗೂ ಆತ್ಮತೃಪ್ತಿ ಕಂಡುಕೊಳ್ಳಬಹುದು ಎಂದು ಕೆನರಾ ಬ್ಯಾಂಕ್‌ನ ಪ್ರಧಾನ ಕಛೇರಿಯ ಕಾರ್ಯನಿರ್ವಾಹಕ ನಿರ್ದೇಶಕ ಅಶೋಕಚಂದ್ರ ಹೇಳಿದರು.

ಇಲ್ಲಿನ ಜೈ ಭೀಮ್ ಭವನದಲ್ಲಿ ಕೆನರಾ ಬ್ಯಾಂಕ್ ಹಾಗೂ ಎಸ್ಸಿ, ಎಸ್ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇತ್ತೀಚೆಗೆ ನಡೆದ 'ಅಂಬೇಡ್ಕರ್ ಜಯಂತಿ' ಮತ್ತು 'ಬ್ಯಾಂಕಾಯಣ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಎನ್.ಟಿ. ಎರ್ರಿಸ್ವಾಮಿ ಅವರ ಸಾರ್ಥಕ ಬದುಕು ಮತ್ತು ವೃತ್ತಿ ಕಥನವು ಬ್ಯಾಂಕಿನ ಸಮಸ್ತ ಸಿಬ್ಬಂದಿಗೆ ಮಾರ್ಗದರ್ಶನವಾಗಲಿ ಎಂದು ಆಶಿಸಿದರು.

ಹೃದಯರೋಗ ತಜ್ಞ ಡಾ.ಬಿ.ಎಚ್ ನಟೇಶ್ ಅವರು ಅಂಬೇಡ್ಕರ್ ವಿಚಾರಧಾರೆ ಕುರಿತು ಉಪನ್ಯಾಸ ನೀಡಿದರು.

ಕೆನರಾ ಬ್ಯಾಂಕ್ ಪ್ರಧಾನ ಕಛೇರಿಯ ಮಹಾ ಪ್ರಬಂಧಕರಾದ ಪಿ. ಗೋಪಾಲಕೃಷ್ಣ, ರಾಮನಾಯ್ಕ್, ಹಿರಿಯ ಪತ್ರಕರ್ತೆ ಮಂಜುಶ್ರೀ ಕಡಕೋಳ, ಹಿರಿಯ ಪತ್ರಕರ್ತ ಟಿ.ಎನ್. ಷಣ್ಮುಖ, ಸಾಹಿತಿ ಮಲ್ಲಿಕಾರ್ಜುನ್ ಕಡಕೋಳ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿನ 6ನೇ ತರಗತಿ ದಾಖಲಾತಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ, ಮೇ 17 - ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ಮೇ. 19 ರಂದು ನಡೆಸಲಾಗುವುದು.

ವಿದ್ಯಾರ್ಥಿಗಳ ಪ್ರವೇಶ ಪತ್ರ (ಹಾಲ್ ಟಿಕೆಟ್) ವನ್ನು ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44, ಜಿಲ್ಲಾಡಳಿತ ಭವನ, ಪಿ.ಬಿ ರಸ್ತೆ, ಕರೂರು ಕ್ರಾಸ್, ದಾವಣಗೆರೆ ಇಲ್ಲಿ ವಿತರಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಯ 6ನೇ ತರಗತಿ ಪ್ರವೇಶಕ್ಕಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಪಡೆದುಕೊಳ್ಳುವಂತೆ ತಿಳಿಸಿದೆ. ಹಾಗೂ ಪ್ರವೇಶ ಪತ್ರ ಪಡೆಯಲು ಬರುವ ವಿದ್ಯಾರ್ಥಿ, ಪೋಷಕರು ವಿದ್ಯಾರ್ಥಿಯ ಪಾಸ್ ಪೋರ್ಟ್ ಅಳತೆಯ ಎರಡು ಭಾವಚಿತ್ರ, ಆಧಾರ್ ಕಾರ್ಡ್, ಅರ್ಜಿ ಸಲ್ಲಿಸಿರುವ ಪ್ರತಿಯನ್ನು ಕಡ್ಡಾಯವಾಗಿ ತರಬೇಕು.

ವಿವರಕ್ಕೆ ದೂ.ಸಂ: 08192-250022 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

## ನ್ಯಾಮತಿಯಲ್ಲಿ ಇಂದು ವಿದ್ಯುತ್ ಗ್ರಾಹಕರ ಸಂವಾದ ಸಭೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ನ್ಯಾಮತಿ ಉಪವಿಭಾಗ ಕಚೇರಿಯಲ್ಲಿ ಗ್ರಾಕರ ಕುಂದು-ಕೊರತೆ ಸಭೆಯನ್ನು ಇಂದು ಮಧ್ಯಾಹ್ನ 3 ಗಂಟೆಯಿಂದ 5.30 ರವರೆಗೆ ಗ್ರಾಹಕರ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ನ್ಯಾಮತಿ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ವಿದ್ಯುತ್ ಕುಂದು-ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಹಾಜರಾಗಬಹುದು.

## ಅಂತರ್ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆ

ದಾವಣಗೆರೆ, ಮೇ 17 - ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ನಾಡಿದ್ದು ದಿನಾಂಕ 19ರ ಭಾನುವಾರ ನಗರದ ಗುರುಭವನ ದಲ್ಲಿ ಅಂತರ್ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯನ್ನು ಏರ್ಪಡಿಸ ಲಾಗಿದೆ ಎಂದು ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ ತಿಳಿಸಿದ್ದಾರೆ. ವಿವರಕ್ಕೆ ಯುವರಾಜ್ (99456 13469) ಮಂಜುಳಾ (7259310197) ಅವರನ್ನು ಸಂಪರ್ಕಿಸಬಹುದು.

## ಸೈಕಲ್ ಬಳಸಿ ಆರೋಗ್ಯ, ಆನಂದ, ಪರಿಸರ ರಕ್ಷಿಸಿ




ದಾವಣಗೆರೆ, ಮೇ 17 - ಸೈಕಲ್ ಸವಾರಿ ಮಾಡೋಣ, ಪೆಟ್ರೋಲ್, ಪರಿಸರ ಉಳಿಸೋಣ, ಸೈಕಲ್ ಸವಾರಿ ಆರೋಗ್ಯಕ್ಕೆ ರಹದಾರಿ. ಸಾಲ, ಕುಡಿತ, ತಂಬಾಕು ಸಾವಿಗೆ ರಹದಾರಿ, ಸದಾ ರೋಗಗಳು, ವಾಹನಗಳಿಂದ ದೂರವಿರಿ ಎಂಬ ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಘೋಷ ವಾಕ್ಯಗಳನ್ನು ಒಳಗೊಂಡಿರುವ ಸೈಕಲ್‌ಗಳನ್ನು ಬಡವರಿಗಾಗಿ ನೀಡುತ್ತಿರುವುದು ಸಂತಸದ ವಿಷಯ. ಇಂತಹ ಸತ್ಕಾರ್ಯಕ್ಕೆ ದಾನ ನೀಡುವುದು ನಮ್ಮ ಕರ್ತವ್ಯ. ದಯವಿಟ್ಟು ಆರ್ಥಿಕವಾಗಿ ಸಬಲರಾದವರು ಇಂತಹ ಸತ್ಕಾರ್ಯಗಳಿಗೆ ದಾನವಿತ್ತು ಸಹಕರಿಸಬೇಕು ಎಂದು ಶ್ರೀಮತಿ ಎಸ್. ಮಲ್ಲಿಕಾ ಹೆಗಡೆ ಅವರು ಕರೆ ನೀಡಿದರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಟ್ರಸ್ಟ್ ಕಚೇರಿಯಲ್ಲಿ ಈಚೆಗೆ ನಡೆದ 167ನೇ ಸೈಕಲ್ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಿವೃತ್ತ ಪ್ರಾಂಶುಪಾಲ ಶ್ರೀನಿವಾಸ್ ಕುಮಾರ್ ಮಾತನಾಡಿ, ಕರುಣಾ ಟ್ರಸ್ಟ್ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು. ಸರ್ಕಾರಿ ಕಾರ್ಯಕ್ರಮಗಳು ಯಶಸ್ವಿಯಾಗದಿರಲು ಕಾರಣ ಎಲ್ಲವನ್ನು ಉಚಿತವಾಗಿ ಕೊಡುವುದು. ಆದರೆ ಟ್ರಸ್ಟಿನಿಂದ ಫಲಾನುಭವಿಗಳಿಗೆ ಉಚಿತವಾಗಿ ಕೊಡದೇ ಅವರಿಂದ ಶೇ. 10 ರಷ್ಟಾದರೂ ತೆಗೆದುಕೊಂಡರೆ ಅದಕ್ಕೆ ನಿಜವಾದ ಮೌಲ್ಯವಿರುತ್ತದೆ. ಅಂತಹ ಸತ್ಕಾರ್ಯ ಟ್ರಸ್ಟಿನಿಂದ ನಡೆಯುತ್ತಿದೆ. ಅರ್ಹರಿಗೆ ಸೈಕಲ್ ನೀಡಿದ್ದಾರೆ. ನಾವು ಕೊಟ್ಟ ಹಣ ದುರ್ವಿನಿಯೋಗವಾಗದೆ, ಸದುಪಯೋಗವಾಗಿದೆ ಎಂದು ಸ್ಥಳದಲ್ಲಿಯೇ ದಾನವಿತ್ತು ಸಂತಸ ವ್ಯಕ್ತಪಡಿಸಿದರು.


ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ದಾವಣಗೆರೆಯ ಎಲ್ಲರಲ್ಲಿ ಉತ್ತಮ ಆರೋಗ್ಯ, ಆನಂದದ ಅರಿವು ಮೂಡಬೇಕು. ಅರಿವು ಆಧಾರಿತ ಸಾಮೂಹಿಕ ಕಾರ್ಯಗಳಾಗಬೇಕು. ನಾವೇ ಸಮಸ್ಯೆಗಳನ್ನು ಸೃಷ್ಟಿಸುವವರು ಅದಕ್ಕೆ ಪರಿಹಾರವೂ ನಮ್ಮಿಂದಲೇ. ಉತ್ತಮ ಆರೋಗ್ಯ ಪಡೆಯಲು, ಪರಿಸರ ಉಳಿಸಲು ಸೈಕಲ್ ಬಳಸಬೇಕು ಎಂದರು.

ಪ್ರೊ. ಎಂ. ಬಸವರಾಜ್ ಮಾತನಾಡಿ, ಬೆಣ್ಣೆ ನಗರಿಯಾಗಿರುವ ದಾವಣಗೆರೆ, ಸೈಕಲ್ ನಗರಿಯಾಗಬೇಕು ಎಂಬ ಆಶಯವನ್ನು ತಿಳಿಸಿದರು.

ಟ್ರಸ್ಟಿನ ಉಪಾಧ್ಯಕ್ಷ ಬಸವರಾಜ ವಡೆಯರ್ ಅವರು ದಾನಿಗಳಿಗೆ ಮತ್ತು ಫಲಾನುಭವಿಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಡಾ. ಎಸ್. ಮೃತ್ಯುಂಜಯ ಅವರು ಕರುಣಾ ಟ್ರಸ್ಟಿನ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಫಲಾನುಭವಿ ಪವನ್ ಮಾತನಾಡಿ, ತಂದೆ-ತಾಯಿಯನ್ನು ಕಳೆದುಕೊಂಡ ನನಗೆ ಸೈಕಲ್ ನೀಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಮಧುಸೂದನ್ ವಂದಿಸಿದರು.

### ಲಾಲ್‌ವಾನಿ ಪೇಪರ್ ಗ್ರೂಪ್ ಮಾಲೀಕ ಉಗಮ್‌ರಾಜ್ ಬೀಕ್‌ಚಂದ್ ಜೀ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 3ನೇ ಮೇನ್, 3ನೇ ಕ್ರಾಸ್ ವಾಸಿ, ಲಾಲ್‌ವಾನಿ ಪೇಪರ್ ಗ್ರೂಪ್ ಮಾಲೀಕರಾದ **ಉಗಮ್‌ರಾಜ್ ಬೀಕ್‌ಚಂದ್‌ಜೀ** ಅವರು ದಿನಾಂಕ 17-05-2024ರ ಶುಕ್ರವಾರ ರಾತ್ರಿ 8.37ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18-05-2024ರ ಶನಿವಾರ ಬೆಳಿಗ್ಗೆ 10.30 ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಜೈನರ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 9886163130

### ವಿಮಲಾ ಪಲ್ಲಾಗಟ್ಟೆ ನಿಧನ


ಜನನ : 08-02-1955 ನಿಧನ : 16-05-2024

ದಾವಣಗೆರೆ ವಾಸಿ, ಕೆ.ಸಿ. ಪಲ್ಲಾಗಟ್ಟೆ ಬಸವರಾಜಪ್ಪ ಅವರ ದ್ವಿತೀಯ ಪುತ್ರಿ ಹಾಗೂ ಲಿಂಗರಾಜು ಅಮರಾಪುರಂ ಅವರ ಪತ್ನಿ **ಶ್ರೀಮತಿ ವಿಮಲಾ ಪಲ್ಲಾಗಟ್ಟೆ** ಅವರು ದಿನಾಂಕ 16-05-2024ರ ಗುರುವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18-05-2024ರ ಶನಿವಾರ ಮಧ್ಯಾಹ್ನ 1 ಕ್ಕೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

ಶ್ರೀಮತಿ ವಿಮಲಾ ಪಲ್ಲಾಗಟ್ಟೆ ಅವರ 'ಶಿವಗಣಾರಾಧನೆ'ಯನ್ನು ದಾವಣಗೆರೆಯ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ (# 2256) ಶ್ರೀ ಕೃಷ್ಣ ಕಲಾ ಮಂದಿರದಲ್ಲಿ ಏರ್ಪಡಿಸಲಾಗಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 87624- 46946

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 16.5.2024ರಂದು ನಿಧನರಾದ ನಿಜಲಿಂಗಪ್ಪ ಲೇಔಟ್ ನಿವಾಸಿ

**ಶ್ರೀ ಯರಗುಂಟೆ ರುದ್ರೇಶ್**

(ಅಕ್ಕಿ ವರ್ತಕರು)

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

- ಎಚ್.ಎಂ. ನಾಗರಾಜ್, ಶ್ರೀ ಶೈಲ ಮಲ್ಲಿಕಾರ್ಜುನ್ ಟ್ರೇಡರ್ಸ್
- ಬಿ. ಸೋಮಣ್ಣ, ಶ್ರೀ ಪರಮಾನಂದ ಟ್ರೇಡರ್ಸ್
- ಎ. ರಮೇಶ್, ಶ್ರೀ ಗೊಲ್ಲಾಳೇಶ್ವರ ಟ್ರೇಡರ್ಸ್
- ಶಿವಕುಮಾರ್ (ವೈ.ಆರ್. ಬಾಬು)
- ಎಂ.ಹೆಚ್. ಪರಶುರಾಮ, ಶ್ರೀ ಕೊಡೇಕಲ್ ಟ್ರೇಡರ್ಸ್
- ಸಿ.ರುದ್ರೇಶ್, ಶ್ರೀ ಸಂಗಮೇಶ್ವರ ಕಮರ್ಷಿಯಲ್ಸ್
- ಎಸ್.ಎಂ. ವೀರೇಶ್, ಶ್ರೀ ಚಂದ್ರಗಿ ಕಲ್ಲೇಶ್ವರ ಟ್ರೇಡರ್ಸ್
- ಎಸ್. ಮಹೇಶ್, (S.S.T) ಶ್ರೀ ಸಿದ್ದೇಶ್ವರ ಟ್ರೇಡರ್ಸ್
- ವೀರಣ್ಣ ಕಟ್ಟಿಗೆಹಳ್ಳಿ
- ಹೆಚ್.ಎಂ. ತಿಪ್ಪೇರುದ್ರೇಶ್ (HMR)

## ಹರಿಹರ ತಾಲ್ಲೂಕು ರೈತರ ಖಾತೆಗೆ ಬೆಳೆ ಹಾನಿ ಬಾಕಿ 2.55 ಕೋಟಿ ರೂ.ಜಮಾ

ಹರಿಹರ, ಮೇ 17- ತಾಲ್ಲೂಕಿನಲ್ಲಿ ಬೆಳೆ ಹಾನಿಯಾದ ರೈತರ ಬಾಕಿ ಒಟ್ಟು 2.55 ಕೋಟಿ ರೂಪಾಯಿ ಹಣವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡಲಾಗಿದೆ ಎಂದು ತಹಶೀಲ್ದಾರ್ ಗುರುಬಸವರಾಜ್ ತಿಳಿಸಿದರು.

ಜನತಾವಾಣಿಯೊಂದಿಗೆ ದೂರವಾಣಿಯಲ್ಲಿ ಅವರು ಮಾತನಾಡುತ್ತಾ ತಾಲ್ಲೂಕಿನಲ್ಲಿ ಬೆಳೆ ಹಾನಿಯಾದ ಒಟ್ಟು 4268 ಫಲಾನುಭವಿಗಳ ಪಟ್ಟಿಯನ್ನು ಸಿದ್ದತೆ ಮಾಡಿ ಸರ್ಕಾರಕ್ಕೆ ಕಳಿಸಲಾಗಿತ್ತು. ಅದರಲ್ಲಿ ಮೊದಲ ಕಂತಿನಲ್ಲಿ 80 ಲಕ್ಷದ 27 ಸಾವಿರದ 929 ರೂಪಾಯಿ, ಸರಿ ಸುಮಾರು ಒಬ್ಬರಿಗೆ 2 ಸಾವಿರದಂತೆ ರೈತರ ಖಾತೆಗೆ ಜಮಾ ಮಾಡಲಾಗಿತ್ತು. ತದನಂತರ 3208 ರೈತ ಫಲಾನುಭವಿಗಳಿಗೆ ಒಟ್ಟು 1 ಕೋಟಿ 75 ಲಕ್ಷದ 24 ಸಾವಿರದ 611 ರೂಪಾಯಿ ಫಲಾನುಭವಿಗಳ ಖಾತೆಗೆ ಒಬ್ಬರಿಗೆ ಸರಿ ಸುಮಾರು 4 ಸಾವಿರ ಜಮಾ ಮಾಡಿಲಾಗಿದ್ದು, ಒಟ್ಟು ಇಲ್ಲಿಯವರೆಗೂ 2 ಕೋಟಿ 55 ಲಕ್ಷದ 52 ಸಾವಿರದ 540 ರೂಪಾಯಿ ಹಣವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡಲಾಗಿದೆ ಎಂದು ಹೇಳಿದರು. ಇನ್ನೂ ತಾಲ್ಲೂಕಿನ 568 ಫಲಾನುಭವಿಗಳು ತಮ್ಮ ಆಧಾರ್ ಮತ್ತು ಬ್ಯಾಂಕ್ ಖಾತೆ ಸೇರಿದಂತೆ, ಸರ್ಕಾರ ಕೇಳಿದ ದಾಖಲೆಗಳನ್ನು ಇದುವರೆಗೂ ಒದಗಿಸದೇ ಇರುವುದರಿಂದ ಅವರ ಖಾತೆಗೆ ಹಣ ಜಮಾ ಆಗಿರುವುದಿಲ್ಲ. ಅವರು ದಾಖಲೆ ಸಲ್ಲಿಸಿ ದರೆ ಖಾತೆಗೆ ನೇರವಾಗಿ ಹಣ ರವಾನಿಸುವ ಕಾರ್ಯ ವನ್ನು ಮಾಡಲಾಗುತ್ತದೆ ಎಂದು ಹೇಳಿದರು.

## ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು



ದಾವಣಗೆರೆ, ಮೇ 17 - ಒಂದು ಒಳ್ಳೆಯ ಪುಸ್ತಕವು ನೂರು ಸ್ನೇಹಿತರ ಮೌಲ್ಯದ್ದಾಗಿದೆ. ನಮ್ಮ ಜೀವನದಲ್ಲಿ ಪುಸ್ತಕಗಳು ನಮ್ಮ ಗುರಿಗಳನ್ನು ಸಾಧಿಸಲು, ಸರಿಯಾದ ಹಾದಿಯಲ್ಲಿ ನಡೆಸಲು ಸಹಕಾರಿಯಾಗುತ್ತವೆ. ಇಂದಿನ ಆಧುನಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಕಲಿಕೆಯು ಆಜೀವ ಪ್ರಕ್ರಿಯೆಯಾಗಿದ್ದು, ನಮ್ಮ ಒಂಟಿತನ ಪ್ರಪಂಚದಿಂದ ಹೊರಬರಲು ಪುಸ್ತಕಗಳು ಸಹಕಾರಿ. ಪ್ರತಿಯೊಬ್ಬ ವಿದ್ಯಾರ್ಥಿಯು ಪುಸ್ತಕಗಳನ್ನು ಓದುವ ಕ್ರಮ ಬೆಳೆಸಿಕೊಂಡರೆ ಹೆಚ್ಚು ಜ್ಞಾನ ಸಂಪಾದನೆ ಸಾಧಿಸಲು ಸಾಧ್ಯ ಎಂದು ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಬಿ. ಬೋರಯ್ಯ ಅವರು ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಭಾಗವು ಹಮ್ಮಿಕೊಂಡಿದ್ದ ವಿಶ್ವ ಪುಸ್ತಕ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಸಮಾರಂಭದಲ್ಲಿ ಎ.ಆರ್.ಜಿ ಪದವಿಪೂರ್ವ ಕಾಲೇಜಿನ ಕೆ. ಬೊಮ್ಮಣ್ಣ, ಗ್ರಂಥಾಲಯ ವಿಭಾಗದ ಮುಖ್ಯಸ್ಥ ಡಾ. ಚಮನ್ ಸಾಬ್, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಅನಿತಾಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್. ತಿಪ್ಪೇಸ್ವಾಮಿ, ಐಕ್ಯೂಎಸಿ ಸಂಚಾಲಕರಾದ ಪ್ರೊ. ರಶ್ಮಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ತಿಪ್ಪಾರೆಡ್ಡಿ, ಕಛೇರಿ ಅಧೀಕ್ಷಕ ಜಿ.ಆರ್. ಕರಿಬಸಪ್ಪ, ಅನುಸೂಯಮ್ಮ, ಸಚಿನ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಧಾರವಾಡದಲ್ಲಿ ನಾಳೆ ದೈವಜ್ಞ ಸಮಾಜ ಸಂಘದ ಸರ್ವ ಸಾಧಾರಣ ಸಭೆ

ದಾವಣಗೆರೆ, ಮೇ 17- ಹುಬ್ಬಳ್ಳಿ-ಧಾರವಾಡ ರಸ್ತೆಯಲ್ಲಿರುವ ದೈವಜ್ಞ ಸಮುದಾಯ ಭವನದಲ್ಲಿ ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘ (ಧಾರವಾಡ) ಇವರ ವತಿಯಿಂದ ನಾಡಿದ್ದು ದಿನಾಂಕ 19ರ ಭಾನುವಾರ ಸರ್ವ ಸಾಧಾರಣ ಸಭೆ (ಜಿಬಿ)ಯನ್ನು ಏರ್ಪಡಿಸಲಾಗಿದೆ.

ಸಭೆಯಲ್ಲಿ ಸಂಘದ ಆಜೀವ ಸದಸ್ಯತ್ವ ಹೊಂದಿದ ಸದಸ್ಯರು ಹಾಗೂ ನೂತನ ಸದಸ್ಯತ್ವಕ್ಕೆ ಹಣ ತುಂಬಿದವರು ಹಾಜರಿರಲು ದಾವಣಗೆರೆ ದೈವಜ್ಞ ಸಮಾಜದ ಅಧ್ಯಕ್ಷ ಪ್ರಶಾಂತ್ ವಿ. ವೆರ್ಣೇಕರ್ ಕೋರಿದ್ದಾರೆ.

## ದೈವಜ್ಞ ವಿದ್ಯಾರ್ಥಿಗಳಿಗೆ ಎಸ್‌ಪಿಎಆರ್ ಪ್ರತಿಷ್ಠಾನದಿಂದ ಪುರಸ್ಕಾರ

ದಾವಣಗೆರೆ, ಮೇ 17 - ಶ್ರೀಮತಿ ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಶೇ. 85 ರಷ್ಟು ಮತ್ತು ಅದಕ್ಕೂ ಹೆಚ್ಚು ಅಂಕ ಪಡೆದ ದೈವಜ್ಞ ಸಮಾಜ ಬಾಂಧವರ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ 'ಶಾರದಾ ಪುರಸ್ಕಾರ-2024' ರಾಜ್ಯ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಪ್ರತಿಷ್ಠಾನದ ಸಂಸ್ಥಾಪಕರಾದ ಡಾ. ನಲ್ಲೂರು ಅರುಣಾಚಲ ಎನ್.ರೇವಣಕರ್ ತಿಳಿಸಿದ್ದಾರೆ.

ವಿವರಕ್ಕೆ 9341969084, 8147263552 ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ನಿರ್ದೇಶಕ ನಲ್ಲೂರು ಲಕ್ಷ್ಮಣ್‌ರಾವ್ ರೇವಣಕರ್ ವಿನಂತಿಸಿದ್ದಾರೆ. ಅರ್ಜಿಯನ್ನು ಇದೇ ದಿನಾಂಕ 25ರೊಳಗೆ ಸಲ್ಲಿಸಬಹುದು.

### ಚಿರಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

**ದಿ|| ಶ್ರೀ ಎಂ.ವೀರಣ್ಣ ಸೊಸೈಟಿ**
**ನಿಧನ : 18.05.2006**

ಧರ್ಮಪತ್ನಿ : ಶ್ರೀಮತಿ ಪುಷ್ಪಲತಾ ವಿ.
ಮಕ್ಕಳು : ಶ್ರೀಮತಿ ಸುಮಿತ್ರ ಮತ್ತು ಜಯಣ್ಣ
ಮಂಜುನಾಥ್ ವಿ. (ಸೊಸೈಟಿ), ಆನಂದ್ ಕುಮಾರ್ ವಿ.
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

|| ಶ್ರೀ ಶಿವ ನಾರದಮುನಿ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ||, ತಾ|| ಆಲೂರು ಗ್ರಾಮದ ವಾಸಿ ಶ್ರೀಮತಿ ಶ್ರೀ ಮುದೇಗೌಡ್ರು ಚನ್ನಪ್ಪ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು. ದಿನಾಂಕ : 7.5.2024ನೇ ಮಂಗಳವಾರ ಬೆಳಿಗ್ಗೆ 7.30ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಶರಣ ಶ್ರೀ ಮುದೇಗೌಡ್ರು ಚಿಗಟೇರಪ್ಪನವರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **"ಕೈಲಾಸ ಶಿವಗಣಾರಾಧನೆ"ಯನ್ನು** ದಿನಾಂಕ : 19.05.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಜಿ||, ತಾ|| ಆಲೂರು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶ್ರೀ ಮುದೇಗೌಡ್ರು ಚನ್ನಪ್ಪ, ಶ್ರೀಮತಿ ಶ್ರೀ ಎಂ.ಜಿ. ಸುರೇಶ್ ಮತ್ತು ಮಕ್ಕಳು, ಅಕ್ಕ-ತಂಗಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮುದೇಗೌಡ್ರು ವಂಶಸ್ಥರು, ಆಲೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋ. : 9448812779, 9901770817

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಬಸವಗಿರಿಯಲ್ಲಿ ಚಿತ್ರಿಕಿ ಶಿವಕುಮಾರ್ ದಂಪತಿಗೆ ಸನ್ಮಾನ



ದಾವಣಗೆರೆ, ಮೇ 17 - ನಗರದ ಚಿತ್ರಿಕಿ ಶಿವಕುಮಾರ್ ಅವರು ಮಹಾ ರಾಷ್ಟ್ರದ ಗುಡ್ಡಾಪುರ ದಾನಮ್ಮ ದೇವಿ ದೇವಸ್ಥಾನದಲ್ಲಿ ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ವಚನಗಳನ್ನು ಹಾಡಿದರು. ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಕೋಟೆಯಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಅಕ್ಕಮಹಾದೇವಿಯವರ 'ತನುಕರಗದವರಲ್ಲಿ' ವಚನ ಹಾಡಿದರು. ಬೀದರ್‌ನ ಬಸವಗಿರಿಯಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಶಿವಶರಣೆ ಅಕ್ಕ ಅನ್ನಪೂರ್ಣ ತಾಯಿಯವರು ಚಿತ್ರಿಕಿ ಶಿವಕುಮಾರ್ ಮತ್ತು ಪುಷ್ಪ ದಂಪತಿಯನ್ನು ಸನ್ಮಾನಿಸಿ, ಗೌರವಿಸಿದರು.

## ರೆಡ್ ಕ್ರಾಸ್‌ನಿಂದ ಆರೋಗ್ಯ ತಪಾಸಣೆ



ದಾವಣಗೆರೆ, ಮೇ 6 - ಕಾರ್ಮಿಕರ ದಿನಾಚರಣೆ ಪ್ರಯುಕ್ತ ಭಾರತೀಯ ರೆಡ್ ಕ್ರಾಸ್, ಅಲ್ಟ್ರಾಟೆಕ್ ಸಿಮೆಂಟ್, ವಾಸನ್ ಕಣ್ಣಿನ ಆಸ್ಪತ್ರೆ, ರಿಧಿ ದಂತ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಅಂದು ನಗರದ ಅಲ್ಟ್ರಾಟೆಕ್ ಸಿಮೆಂಟ್ ಕಚೇರಿಯಲ್ಲಿ ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ಕಿವಿ, ಮೂಗು, ಗಂಟಲು, ಕಣ್ಣು ಹಾಗೂ ದಂತ ತಪಾಸಣೆ ಜತೆಗೆ ರಕ್ತದಾನ ಶಿಬಿರ ಯಶಸ್ವಿಯಾಗಿ ಜರುಗಿತು.

ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಡಾ.ಎ.ಎಮ್ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ, ನಿರ್ದೇಶಕ ಡಿ.ಎನ್. ಶಿವಾನಂದ್, ವೈದ್ಯಾಧಿಕಾರಿ ಡಾ.ಪಿ.ಕೆ ಬಸವರಾಜ್, ವೈದ್ಯರಾದ ಡಾ. ಯಶವಂತ್, ಡಾ.ಎ.ಎಂ ಶಿವಕುಮಾರ್, ಡಾ.ಎಚ್.ಕೆ. ಪುನೀತ್, ಡಾ.ಎಸ್.ಬಿ. ಭಾವನಾ, ಎಚ್.ಎಸ್. ನಾಗರಾಜ್, ನೂರ್ ಸಾಬ್, ಕಾವ್ಯಶ್ರೀ, ಎನ್.ಜಿ. ಶಿವಕುಮಾರ್, ಆರ್. ವಿನಾಯಕ, ಕೊಟ್ರೇಶ್, ಅಲ್ಟ್ರಾಟೆಕ್ ಸಿಮೆಂಟ್‌ನ ಟೆಕ್ನಿಕಲ್ ವಿಭಾಗದ ವ್ಯವಸ್ಥಾಪಕ ಗಣಪತಿ ಮುಂಬಾರೆ, ಎಂ.ಸಿ ಪ್ರೇಮ್ ಕುಮಾರ್, ರವಿಕುಮಾರ್, ಮಹಮ್ಮದ್ ಅಜರ್ ಮತ್ತು ಇತರರು ಇದ್ದರು.

## ವಸತಿ ಶಾಲೆಯಲ್ಲಿನ 7, 8, 9ನೇ ತರಗತಿಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 17 - ಜಿಲ್ಲೆಯಲ್ಲಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಡಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಲ್ಲಿ ಒಟ್ಟು 22 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಶಾಲೆಗಳಲ್ಲಿ 2024-25ನೇ ಸಾಲಿಗೆ 7, 8 ಮತ್ತು 9ನೇ ತರಗತಿಗಳಲ್ಲಿ ಖಾಲಿಯಿರುವ ಸ್ಥಾನಗಳನ್ನು ಜಿಲ್ಲಾ ಹಂತದಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

7ನೇ ತರಗತಿಯಲ್ಲಿ ಪ.ಜಾತಿ ಹೆಣ್ಣು-1, 8 ನೇ ತರಗತಿಯಲ್ಲಿ ಪ.ಜಾತಿ ಹೆಣ್ಣು-2. ಪ್ರವರ್ಗ-1 ರಲ್ಲಿ ಹೆಣ್ಣು-1, 2ಎ ರಲ್ಲಿ ಹೆಣ್ಣು-1, 3ಬಿ ಯಲ್ಲಿ ಗಂಡು-1 ಹಾಗೂ 9ನೇ ತರಗತಿಯಲ್ಲಿ ಪ.ಜಾತಿ ಹೆಣ್ಣು-1. ಪ.ವರ್ಗದಲ್ಲಿ ಹೆಣ್ಣು- 5 ಒಟ್ಟು 12 ಸ್ಥಾನಗಳು ಖಾಲಿಯಿರುತ್ತವೆ. ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಜಿಲ್ಲೆಯ ಯಾವುದೇ ಶಾಲೆಯಲ್ಲಿ ಸ್ಥಾನ ಲಭ್ಯವಿರುವುದಿಲ್ಲ.

ಮೇಲ್ಕಾಣಿಸಿದ ಖಾಲಿ ಸ್ಥಾನಗಳನ್ನು ಹೊರತು ಪಡಿಸಿ ಇತರೆ (ಲಿಂಗ, ಜಾತಿ) ಆಸಕ್ತಿಯಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ, ವಸತಿ ಶಾಲೆಗಳಲ್ಲಿ ಮುಂದಿನ ದಿನಗಳಲ್ಲಿ ಖಾಲಿಯಾಗಬಹುದಾದ ಸ್ಥಾನಗಳಿಗೆ ಹೆಚ್ಚುವರಿ ಆಯ್ಕೆಪಟ್ಟಿ (ಮೆರಿಟ್ ಲೀಸ್ಟ್) ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ದಾಖಲಾತಿಗೆ ಪರಿಗಣಿಸಲಾಗುವುದು.

ಸಮೀಪದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಶ್ರೀಮತಿ ಇಂದಿರಾಗಾಂಧಿ, ಡಾ.ಬಿ.ಆರ್ ಅಂಬೇಡ್ಕರ್, ಪ್ರತಿಭಾನ್ವಿತ ಹೆಣ್ಣುಮಕ್ಕಳ ವಸತಿ ಶಾಲೆಗಳಲ್ಲಿ ಅರ್ಜಿಗಳನ್ನು ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 31 ರೊಳಗಾಗಿ ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ದಾವಣಗೆರೆ ಇಲ್ಲಿ ಕಡ್ಡಾಯವಾಗಿ ಸಲ್ಲಿಸುವುದು. ಜೂನ್ 5 ರಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ದೇವರಬೆಳಕೆರೆ, ಹರಿಹರ ತಾಲ್ಲೂಕು ಇಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

### ಏಳನೇ ವರ್ಷದ ಪುಣ್ಯಸ್ಮರಣೆ



ಧಾರ್ಮಿಕ, ಅಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಮಾಜ ಸೇವೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅತ್ಯಂತ ಸರಳ ಜೀವನವನ್ನು ನಡೆಸಿದಂತಹ ಸರಳ ಸಜ್ಜನಿಕೆಯ ಮೇರು ವ್ಯಕ್ತಿ

**ದಿ|| ಪಿ. ನಾಗಭೂಷಣ ತೌಡೂರು**

ನಿಧನ : 18.05.2017

ನೀವು ನಮ್ಮನ್ನಗಲಿ ಏಳು ವರ್ಷಗಳಾದವು. ನಿಮ್ಮ ಸವಿನೆನಪು, ಸದಾ ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆದರ್ಶ, ವಿಚಾರಧಾರೆಗಳು ನಮ್ಮ ಬದುಕಿಗೆ ದಾರಿದೀಪವಾಗಿವೆ. ನಿಮ್ಮ ನೆನಪಿನಲ್ಲಿ ಸದಾ ಉಸಿರಾಡುತ್ತಿದ್ದೇವೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ನೆನಪಿನಲ್ಲಿರುವ,

**ಪತ್ನಿ : ಹೇಮಾವತಿ**

**ಮಕ್ಕಳಾದ :** ಶೀತಲ್ ಎನ್. ಪಾಟೀಲ್, ಸಿಂಧೂ ಎನ್. ಪಾಟೀಲ್, ಸಾಗರ್ ಎನ್. ಪಾಟೀಲ್

**ಸಹೋದರರಾದ :**
- ಅಂಬುಜಾ ಉದಯ್‌ಕುಮಾರ್ ಮತ್ತು ಮಕ್ಕಳು.
- ಮಾಲಾ ಪ್ರದೀಪ್‌ಕುಮಾರ್ ಮತ್ತು ಮಕ್ಕಳು.
- ವೀಣಾ ಅಶೋಕ್‌ಕುಮಾರ್ ಮತ್ತು ಮಕ್ಕಳು.
- ನಿರ್ಮಲ ಜಯದೇವಮೂರ್ತಿ ಮತ್ತು ಮಕ್ಕಳು.

- ಶ್ರೀಮತಿ ಶ್ರೀ ಡಾ. ಕಂದನಕೋವಿ ಎಸ್. ಗಂಗಾಧರ್ ಮತ್ತು ಸಹೋದರರು, ಕಂದನಕೋವಿ.
- ಶ್ರೀಮತಿ ಶ್ರೀ ಕೆ.ಬಿ.ಮುದ್ದಪ್ಪ ನಿ.ಸ. ನಿರ್ದೇಶಕರು, ಕಂದನಕೋವಿ.

**ತೌಡೂರು ಗೌಡ್ರ ವಂಶಸ್ಥರು ಹಾಗೂ ಯಜಮಾನ್ ಕಂದನಕೋವಿ ಬೆಳ್ಳೂಡಿ ವಂಶಸ್ಥರು**

## ಸಂಕ್ಷಿಪ್ತ ಸುದ್ದಿ

**ಏರ್ ಇಂಡಿಯಾ ವಿಮಾನದಲ್ಲಿ ಬೆಂಕಿಯ ಎಚ್ಚರಿಕೆ**
ನವದೆಹಲಿ : ಬೆಂಗಳೂರಿಗೆ ಬರುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ಬೆಂಕಿಯ ಎಚ್ಚರಿಕೆ ಕಂಡು ಬಂದ ಕಾರಣ, ವಿಮಾನವನ್ನು ವಾಪಸ್ ದೆಹಲಿಯಲ್ಲಿ ಸುರಕ್ಷಿತವಾಗಿ ಇಳಿಸಲಾಗಿದೆ. ವಿಮಾನದಲ್ಲಿ 175 ಜನರಿದ್ದರು. ವಿಮಾನದ ವಿದ್ಯುತ್ ಘಟಕದಲ್ಲಿ ಬೆಂಕಿಯ ಎಚ್ಚರಿಕೆ ಕಂಡು ಬಂದಿತ್ತು.

**ಕಾಂಗ್ರೆಸ್, ಸಮಾಜವಾದಿ ಪಕ್ಷಗಳು ಅಧಿಕಾರಕ್ಕೆ ಬಂದರೆ ರಾಮ ಮಂದಿರದ ಮೇಲೆ ಬುಲ್ಡೋಜರ್ : ಮೋದಿ**
ಬಾರಾಬಂಕಿ : ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ಅಧಿಕಾರಕ್ಕೆ ಬಂದರೆ ರಾಮ ಮಂದಿರದ ಮೇಲೆ ಬುಲ್ಡೋಜರ್ ಹರಿಸಲಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಬುಲ್ಡೋಜರ್ ಯಾವ ರೀತಿ ಬಳಸಬೇಕು ಎಂಬುದನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯಾನಾಥ್ ಅವರಿಂದ ಕಲಿಯಬೇಕು ಎಂದೂ ಮೋದಿ ಹೇಳಿದ್ದಾರೆ.

**ಬುಡಕಟ್ಟು ಜನರ ಹಕ್ಕು ಕಸಿಯಲು ಮೋದಿ ಸರ್ಕಾರದ ಸಂಚು : ಮಮತಾ**
**ಗೋಪಿಬಲ್ಲಪುರ** : ಬುಡಕಟ್ಟು ಜನರ ಹಕ್ಕುಗಳನ್ನು ಕಸಿಯಲು ಹಾಗೂ ವಿವಿಧ ಹಿಂದುಳಿದ ವರ್ಗಗಳ ಸಮುದಾಯದ ನಡುವೆ ಅಸಹನೆ ಹುಟ್ಟು ಹಾಕಲು ಕೇಂದ್ರದ ಮೋದಿ ಸರ್ಕಾರ ಸಂಚು ನಡೆಸಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

**ಭಾರತದ ಪರಿಸ್ಥಿತಿ ರಷ್ಯಾದಂತಾಗಿದೆ : ಕೇಜ್ರಿವಾಲ್**
ಅಮೃತ್‌ಸರ್ : ಭಾರತದಲ್ಲಿನ ಪರಿಸ್ಥಿತಿ ರಷ್ಯಾದ ರೀತಿಯಂತಾಗಿದೆ ಎಂದು ಹೇಳಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಭಾರತದಲ್ಲಿ ಸರ್ವಾಧಿಕಾರ ಇದೆ. ವಿರೋಧ ಪಕ್ಷದ ನಾಯಕರನ್ನು ಜೈಲಿಗೆ ಹಾಕಲಾಗುತ್ತಿದೆ ಎಂದಿದ್ದಾರೆ.

**ಮಗನನ್ನು ರಾಯ್ ಬರೇಲಿಗೆ ನೀಡುತ್ತಿದ್ದೇನೆ ಎಂದ ಸೋನಿಯಾ**
ರಾಯ್‌ಬರೇಲಿ : ನನ್ನ ಮಗ ರಾಹುಲ್ ಗಾಂಧಿಯನ್ನು ರಾಯ್ ಬರೇಲಿ ಜನತೆಗೆ ನೀಡುತ್ತಿದ್ದೇನೆ. ಅವರು ಕ್ಷೇತ್ರದ ಜನರನ್ನು ನಿರಾಸೆ ಮಾಡುವುದಿಲ್ಲ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿದ್ದಾರೆ.

**ಸಂದೇಶ್‌ಖಾಲಿಯಲ್ಲಿ ಸಿಬಿಐ ಶಿಬಿರ**
ನವದೆಹಲಿ : ಲೈಂಗಿಕ ಪೀಡನೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿ.ಬಿ.ಐ., ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಶಿಬಿರವೊಂದನ್ನು ಸ್ಥಾಪಿಸಿದೆ. ಲೈಂಗಿಕ ಪೀಡನೆ ಸಂತ್ರಸ್ತೆಯರಲ್ಲಿ ಭರವಸೆ ಮೂಡಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಪಾಕ್ ಆಕ್ರಮಿತ ಕಾಶ್ಮೀರ ಸದಾ ಭಾರತದ ಭಾಗ : ರಾಜನಾಥ್**
ಬುಲಿಯಾ : ಪಾಕ್ ಆಕ್ರಮಿತ ಕಾಶ್ಮೀರವು ಈ ಹಿಂದೆಯೂ ಭಾರತದ ಭಾಗವಾಗಿತ್ತು, ಈಗಲೂ ಭಾರತ ಭಾಗವಾಗಿದೆ ಹಾಗೂ ಮುಂದೆಯೂ ಭಾರತದ ಭಾಗವಾಗಿರಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

**ಪಾಕ್ ಆಕ್ರಮಿತ ಕಾಶ್ಮೀರದ ಸಂಪನ್ಮೂಲ ಲೂಟಿ**
ನವದೆಹಲಿ : ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಸಂಪನ್ಮೂಲವನ್ನು ಪಾಕಿಸ್ತಾನ ವ್ಯವಸ್ಥಿತವಾಗಿ ಲೂಟಿ ಮಾಡುತ್ತಿದೆ. ಈ ಪ್ರದೇಶವನ್ನು ಪಾಕಿಸ್ತಾನ ಬಲವಂತವಾಗಿ ಹಾಗೂ ಅಕ್ರಮವಾಗಿ ಇರಿಸಿಕೊಂಡಿದೆ. ಇದರಿಂದಾಗಿ ಆ ಪ್ರಾಂತ್ಯದಲ್ಲಿ ಪ್ರತಿಭಟನೆಗಳು ಕಂಡು ಬರುತ್ತಿವೆ ಎಂದು ಭಾರತ ಹೇಳಿದೆ.

**ಛಾಬಹಾರ್‌ನಿಂದ ಇಡೀ ಪ್ರಾಂತ್ಯಕ್ಕೆ ಅನುಕೂಲ**
ನವದೆಹಲಿ : ಛಾಬಹಾರ್ ಬಂದರು ಯೋಜನೆಗೆ ಸಂಬಂಧಿಸಿದಂತೆ ಇರಾನ್ ಹಾಗೂ ಭಾರತ ಮಾಡಿಕೊಂಡಿರುವ ಒಪ್ಪಂದದಿಂದಾಗಿ ಆಫ್ಘಾನಿಸ್ತಾನ, ಮಧ್ಯ ಏಷಿಯಾ ಹಾಗೂ ಇಡೀ ಪ್ರಾಂತ್ಯಕ್ಕೆ ಅನುಕೂಲವಾಗಲಿದೆ. ಈ ಬಗ್ಗೆ ಸಂಕುಚಿತ ಧೋರಣೆ ಸಲ್ಲದು ಎಂದು ಭಾರತ ಹೇಳಿದೆ.

**ಪತಂಜಲಿ ಉತ್ಪನ್ನಗಳ ಅಮಾನತ್ತಿಗೆ ತಡೆ**
ನವದೆಹಲಿ : ಪತಂಜಲಿ ಆಯುರ್ವೇದ ಹಾಗೂ ದಿವ್ಯ ಫಾರ್ಮಸಿಗಳ 14 ಉತ್ಪನ್ನಗಳ ಅನುಮತಿಗೆ ವಿಧಿಸಲಾಗಿದ್ದ ಅಮಾನತ್ತು ಆದೇಶಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಮಳೆಯಿಂದ ಸಾರ್ವಜನಿಕರಿಗೆ ತೊಂದರೆ ಆಗಿಲ್ಲ

ಹರಿಹರ, ಮೇ.17- ನಗರದಲ್ಲಿ ಕಳೆದ ಎರಡು ದಿನಗಳಿಂದ ಬೀಳುತ್ತಿರುವ ಮಳೆಯಿಂದಾಗಿ ಯಾವುದೇ ರೀತಿಯ ಅವಘಡ ಮತ್ತು ಸಾರ್ವಜನಿಕರಿಗೆ ತೊಂದರೆಗಳು ಸಂಭವಿಸಿರುವುದಿಲ್ಲ ಎಂದು ಪೌರಾಯುಕ್ತ ಐಗೂರು ಬಸವರಾಜ್ ತಿಳಿಸಿದರು.



**ಹರಿಹರ ಪೌರಾಯುಕ್ತ ಬಸವರಾಜ್**

ಈ ಮಳೆಯಿಂದಾಗಿ ತುಂಗಭದ್ರಾ ನದಿಗೆ ಸಣ್ಣ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ನಗರದ ಜನತೆಗೆ ಸ್ವಲ್ಪ ಮಟ್ಟಿಗೆ ಕುಡಿಯುವ ನೀರಿನ ಸಮಸ್ಯೆ ಸದ್ಯಕ್ಕೆ ಇಲ್ಲದಂತೆ ಆಗಿದೆ ಎಂದು ಪತ್ರಿಕೆ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ ತಿಳಿಸಿದರು.

ನಗರದ ಆಶ್ರಯ ಬಡಾವಣೆಯ ಕೊನೆಯಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಡ್ರೈನೇಜ್ ಸ್ವಚ್ಚತೆ ಮಾಡಿಸಿದ್ದು, ಆಶ್ರಯ ಬಡಾವಣೆ ಜೊತೆಗೆ ಬೆಂಕಿನಗರ ಬಡಾವಣೆಯ ಜನತೆಯ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದರು.

ಇನ್ನು ಬೆಸ್ಕಾಂ ಇಲಾಖೆಯ ಸಿಬ್ಬಂದಿಗಳು ವಿದ್ಯುತ್ ತಂತಿಗಳಿಗೆ ಅಡ್ಡಲಾಗಿ ಇರುವಂತಹ ಮರಗಳನ್ನು ಕಡಿಯುವ ಮೂಲಕ ವಿದ್ಯುತ್ ಸರಬರಾಜಿಗೆ ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ. ಹಾಗಾಗಿ ಮಳೆ ಬಂದರೂ ಸಹಿತ ಇದುವರೆಗೂ ಯಾವುದೇ ರೀತಿಯ ಅವಘಡಗಳು ಸಂಭವಿಸಿರುವುದಿಲ್ಲ ಎಂದು ಪೌರಾಯುಕ್ತರು ತಿಳಿಸಿದರು.

# ಜನಪ್ರಿಯ ಸೇವೆ ಮಾತ್ರ ನೆನಪಿನಲ್ಲಿ ಉಳಿಯುತ್ತದೆ

### ಹರಪನಹಳ್ಳಿ : ನ್ಯಾಯಾಧೀಶರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಹಿರಿಯ ವಕೀಲ ಬಿ.ಕೃಷ್ಣಮೂರ್ತಿ



ಹರಪನಹಳ್ಳಿ, ಮೇ 17- ಯಾವುದೇ ಸೇವೆ ಜನಪ್ರಿಯವಾಗಿದ್ದರೆ ಮಾತ್ರವೇ ಸದಾ ಜನರ ನೆನಪಿನಲ್ಲಿ ಉಳಿಯಲು ಸಾಧ್ಯ ಎಂದು ಹಿರಿಯ ನ್ಯಾಯವಾದಿ ಬಿ. ಕೃಷ್ಣಮೂರ್ತಿ ಅಭಿಪ್ರಾಯಿಸಿದರು.

ವರ್ಗಾವಣೆಯಾಗಿರುವ ನ್ಯಾಯಾಧೀಶರಾದ ಎಂ.ಭಾರತಿ ಮತ್ತು ಫಕ್ಕೀರವ್ವ ಕೆಳಗೇರಿ ಅವರುಗಳಿಗೆ ಇಲ್ಲಿನ ತಾಲ್ಲೂಕು ವಕೀಲರ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಉಭಯ ನ್ಯಾಯಾಲಯದ ನ್ಯಾಯಾಧೀಶರು ಮೂರು ವರ್ಷಗಳ ಕಾಲ ಇಲ್ಲಿ ಸೇವೆ ಸಲ್ಲಿಸಿ ಜನಪ್ರಿಯ ನ್ಯಾಯಾಧೀಶರಾಗಿದ್ದರು. ಹೀಗಾಗಿ ಅವರ ನೆನಪು ಎಲ್ಲರಲ್ಲಿಯೂ ಸದಾ ಉಳಿಯುತ್ತದೆ. ಆದರೆ, ಅಂತಹವರು ತಾಲ್ಲೂಕಿನಿಂದ ದೂರವಾಗುತ್ತಿರುವುದು ದುಃಖದ ವಿಚಾರ ಎನಿಸಿದರೂ ಸಹ ಅವರು ಉನ್ನತ ಹುದ್ದೆ ಅಲಂಕರಿಸಲಿ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಅವರು, ಯಾವ ಊರಿಗೆ ಹೋದರೂ ಅದನ್ನು ನಮ್ಮ ಊರು, ನಮ್ಮ ಜನ ಎಂದು ಭಾವಿಸಿದರೆ ಮಾತ್ರವೇ ಉತ್ತಮವಾಗಿ ಕೆಲಸ ಮಾಡಲು ಸಾಧ್ಯ. ಹೀಗಾಗಿ ತೆರಳಿದ ಕೂಡಲೇ ಅಲ್ಲಿನವರನ್ನು ನಾವೇ ಅತಿಥಿಗಳಂತೆ ಕಾಣಬೇಕು. ಆಗ ಮಾತ್ರವೇ ಸಂದರ್ಭಕ್ಕೆ ಅನುಸಾರವಾಗಿ ಆಗುವ ವರ್ಗಾವಣೆಗಳು ಬೇಜಾರು ತರುವುದಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಮೂರು ವರ್ಷಗಳ ಕಾಲ ಸಲ್ಲಿಸಿರುವ ಸೇವೆಯಲ್ಲಿ ನನಗೆ ಎಲ್ಲಾ ವಕೀಲರುಗಳು ಸಾಕಷ್ಟು ಸಲಹೆ, ಸಹಕಾರ ನೀಡಿದ್ದಾರೆ. ಎಲ್ಲಾ ಹಿರಿಯ ವಕೀಲರಿಗೆ ನಾನು ಆಭಾರಿಯಾಗಿರುತ್ತೇನೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ ಭಾರತಿ ಮಾತನಾಡಿ, ವಕೀಲರುಗಳು ಮೊಬೈಲ್ ಪ್ರೇಮಿಗಳಾಗ ಬಾರದು. ಪುಸ್ತಕದ ಪ್ರೇಮಿಗಳಾಗಬೇಕು. ಸಮಾಜದಲ್ಲಿರುವ ಶ್ರೀ ಸಾಮಾನ್ಯನ ಬಗ್ಗೆ ಅರಿವು, ಮಾನವೀಯ ಗುಣಗಳು, ಅನುಕಂಪ, ದಕ್ಷತೆ, ಪ್ರಾಮಾಣಿಕತೆಯ ಸೇವೆ ಇರುವ ವ್ಯಕ್ತಿಗಳು ನ್ಯಾಯಾಧೀಶರ ಸ್ಥಾನಕ್ಕೆ ಅರ್ಹರು ಹಾಗೂ ಸಮರ್ಥರಾಗಿರುತ್ತಾರೆ ಎಂದು ಹೇಳಿದರು.

ನನ್ನ ಮೂರು ವರ್ಷಗಳ ಅವಧಿಯಲ್ಲಿ ನೂತನ ನ್ಯಾಯಾಲಯದ ಕಟ್ಟಡಕ್ಕಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ ಎಂದರು.

ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್, ಪಿ. ಜಗದೀಶ್ ಗೌಡ್ರು, ಮತ್ತಿಹಳ್ಳಿ ಅಜ್ಜಪ್ಪ, ಕೆ. ಚಂದ್ರಗೌಡ್ರು, ವಿ.ಜಿ.ಪ್ರಕಾಶ್‌ಗೌಡ, ಕೆ.ಎಂ.ಚಂದ್ರಮೌಳಿ, ಕೆ.ಬಸವರಾಜ, ರಾಮ್ ಭಟ್, ಎಂ.ಮೃತ್ಯುಂಜಯ, ಬಿ. ಗೋಣಿಬಸಪ್ಪ, ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ ಮತ್ತು ನಿರ್ಮಲ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಆರುಂಡಿ ನಾಗರಾಜ್, ಎಸ್.ಎಂ.ರುದ್ರಮುನಿ, ಕೊಟ್ರೇಶ್, ಸುರೇಶ್ ಸೇರಿದಂತೆ ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಉಪಸ್ಥಿತರಿದ್ದರು.

## ಹೊಳೆಸಿರಿಗೆರೆ : ಉತ್ತಮ ಮಳೆಗಾಗಿ ಕತ್ತೆ ಮದುವೆ



ಮಲೇಬೆನ್ನೂರು, ಮೇ 17- ಸಮೀಪದ ಹೊಳೆಸಿರಿಗೆರೆ ಗ್ರಾಮದಲ್ಲಿ ಉತ್ತಮ ಮಳೆ ಆಗುವಂತೆ ವರುಣ ದೇವನಿಗೆ ಪ್ರಾರ್ಥಿಸಿ, ಕತ್ತೆಗಳಿಗೆ ಮದುವೆ ಮಾಡಿಸಿದ್ದಾರೆ.

ಮುಂಗಾರು ಮಳೆಯ ಸಿಂಚನ ಎಲ್ಲೆಡೆ ಆಗುತ್ತಿದ್ದು, ಹೊಳೆಸಿರಿಗೆರೆ ಗ್ರಾಮದಲ್ಲಿ ಇದುವರೆಗೂ ಕೃಷಿ ಚಟುವಟಿಕೆಗೆ ಯೋಗ್ಯವಾದ ಮಳೆ ಬಂದಿಲ್ಲ ಎಂದು ಗ್ರಾಮಸ್ಥರು ತಿಳಿಸಿದರು.

ಕತ್ತೆ ಮದುವೆ ಮಾಡಿದ್ರೆ ಮಳೆ ಬರಲಿದೆ ಎಂಬ ನಂಬಿಕೆಯಿಂದ ಕತ್ತೆಗಳ ಮದುವೆ ಮಾಡಿಸಿದ್ದೇವೆ ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಾಲೇಶ್ ಕಣೇಕಲ್ ಹೇಳಿದರು.

ಮದುಮಕ್ಕಳಂತೆ ಕತ್ತೆಗಳನ್ನು ಸಿಂಗಾರಗೊಳಿಸಿ, ಶ್ರೀ ಯೋಗಿ ನಾರೇಯಣ ದೇವಸ್ಥಾನದಲ್ಲಿ ಶಾಸ್ತ್ರೋಕ್ತವಾಗಿ ಮದುವೆ ಮಾಡಿಸಿದರು. ಬಾಸಿಂಗ ಹಾಗೂ ಕೊರಳಿಗೆ ಹೂಮಾಲೆ ಹಾಕಿದ ಕತ್ತೆಗಳಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿದರು. ಗ್ರಾಮಸ್ಥರು ಎಲ್ಲಾ ದೇಗುಲಗಳಿಗೆ ಪೂಜೆ ಸಲ್ಲಿಸಿ, ಉತ್ತಮ ಮಳೆ, ಬೆಳೆಗಾಗಿ ಪ್ರಾರ್ಥಿಸಿದರು.

ಈ ವೇಳೆ ಗ್ರಾ.ಪಂ. ಸದಸ್ಯ ಬಂಡೇರ ಪ್ರಭು, ಕುಂದೂರು ಶಂಕ್ರಣ್ಣ, ಮಲ್ಲಾಡ್ರ ಪ್ರಭು, ಮಾಳಗಿ ಪ್ರಕಾಶ್, ಎಂ.ಜಿ. ರಾಜಣ್ಣ, ಬ್ಯಾಲದಹಳ್ಳಿ ಶಿವಕುಮಾರ ಮತ್ತಿತರರಿದ್ದರು.

## ಕೇಜ್ರಿವಾಲ್, ಎಎಪಿ ವಿರುದ್ಧ ಆರೋಪ ಪಟ್ಟಿ ದಾಖಲು

ನವದೆಹಲಿ, ಮೇ 17 – ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಹೊಸ ಆರೋಪ ಪಟ್ಟಿ ದಾಖಲಿಸಿದ್ದು, ಅದರಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಆಮ್ ಆದ್ಮಿ ಪಾರ್ಟಿಗಳನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಹಾಲಿ ಮುಖ್ಯಮಂತ್ರಿ ಹಾಗೂ ರಾಜಕೀಯ ಪಕ್ಷವೊಂದನ್ನು ಅಕ್ರಮ ಹಣ ಪ್ರಕರಣದಲ್ಲಿ ಹೆಸರಿಸಲಾಗಿದೆ.

ವಿಶೇಷ ನ್ಯಾಯಾಲಯದ ಎದುರು 200 ಪುಟಗಳ ಆರೋಪ ಪಟ್ಟಿ ದಾಖಲಿಸಲಾಗಿದೆ. ಅಕ್ರಮ ಹಣ ಪ್ರಕರಣದಡಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕೇಜ್ರಿವಾಲ್ ವಿರುದ್ಧ ವೈಯಕ್ತಿಕ ಹಾಗೂ ಆಮ್ ಆದ್ಮಿ ಪಾರ್ಟಿಯ ಸಂಚಾಲಕ ಎರಡೂ ರೀತಿಯಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ.

## ಮತದಾರರ ಗೌಪ್ಯತೆ ಉಲ್ಲಂಘನೆ ಅರ್ಜಿ ತಳ್ಳಿ ಹಾಕಿದ ಸುಪ್ರೀಂ ಕೋರ್ಟ್

ನವದೆಹಲಿ, ಮೇ 17 - ಈಗಿರುವ ಚುನಾವಣಾ ವ್ಯವಸ್ಥೆಯಲ್ಲಿ ಮತದಾರರ ಗೌಪ್ಯತೆಯ ಉಲ್ಲಂಘನೆಯಾಗುತ್ತಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠ ಅರ್ಜಿಯನ್ನು ತಳ್ಳಿ ಹಾಕಿದ್ದು, ಅರ್ಜಿದಾರರು ಏಪ್ರಿಲ್ 26ರಂದು ಸುಪ್ರೀಂ ಕೋರ್ಟ್ ನೀಡಲಾದ ತೀರ್ಪನ್ನು ಓದಿಲ್ಲ ಎಂದು ಹೇಳಿದೆ.

ಅಗ್ನೊಸ್ಟೋಸ್ ಥಿಯೋಸ್ ಎಂಬವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ಮತಗಟ್ಟೆ ಅಧಿಕಾರಿಗಳು ವಿವಿಪ್ಯಾಟ್ ಸ್ಲಿಪ್ ನೋಡಲು ಸಾಧ್ಯ. ಇದರಲ್ಲಿನ ಮಾಹಿತಿಯನ್ನು ಮತಗಟ್ಟೆ ಉಪಕರಣದಲ್ಲಿ ಅಳವಡಿಸಲಾಗಿರುತ್ತದೆ ಎಂದಿದ್ದರು.

ಈ ಅರ್ಜಿಯನ್ನು ತಳ್ಳಿ ಹಾಕಿರುವ ನ್ಯಾಯಾಲಯ, ಮತಗಟ್ಟೆ ಅಧಿಕಾರಿ ಈ ಬಗ್ಗೆ ತಿಳಿಯಲು ಸಾಧ್ಯವೇ ಇಲ್ಲ. ಹಿಂದಿನ ತೀರ್ಪನ್ನು ನೋಡಿ. ಈ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ ಎಂದು ತಿಳಿಸಿದೆ.

## ಪ್ರೊ. ಕೃಷ್ಣಪ್ಪ ಭವನದಲ್ಲಿ ಇಂದಿನಿಂದ ರಾಜ್ಯಮಟ್ಟದ ಕಾರ್ಯಾಗಾರ

ಹನಗವಾಡಿ ಸಮೀಪದ ಬೈಪಾಸ್ ರಸ್ತೆಯಲ್ಲಿರುವ ಪ್ರೊ. ಬಿ.ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಇಂದು ಮತ್ತು ನಾಳೆ ಭಾನುವಾರ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯಿಂದ ರಾಜ್ಯಮಟ್ಟದ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿಂಡಸಘಟ್ಟ ಕ್ಯಾಂಪ್ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಬಿ.ಅರುಣ್‌ಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಹನ್ನೆರಡನೇ ವರ್ಷದಲ್ಲಿ ಮುಂದುವರೆಯುತ್ತಿದ್ದು, ಸಂಸ್ಥೆಯ ಕಾರ್ಯಚಟುವಟಿಕೆಗಳು ಹಾಗೂ ಸಂಘಟನೆಯನ್ನು ರಾಜ್ಯದೆಲ್ಲೆಡೆ ಮತ್ತಷ್ಟು ವಿಸ್ತರಿಸಿ, ಗಟ್ಟಿಗೊಳಿಸುವ ನಿಟ್ಟಿನಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಡಾ.ಸಿ. ಆರ್.ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಎರಡು ದಿನಗಳ ಕಾಲ ರಾಜ್ಯಮಟ್ಟದ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ಶಿಬಿರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಅರುಣ್‌ಕುಮಾರ್ ಕೋರಿದ್ದಾರೆ.

## 11ನೇ ವರ್ಷದ ವಿಪ್ರ ವಟು ಶಿಕ್ಷಣ ಶಿಬಿರ



ದಾವಣಗೆರೆ, ಮೇ 17- ತಾಲ್ಲೂಕು ಬ್ರಾಹ್ಮಣ ಸಮಾಜದ ವತಿಯಿಂದ 11ನೇ ವರ್ಷದ ವಿಪ್ರ ವಟು ಶಿಕ್ಷಣ ಶಿಬಿರವನ್ನು ನಗರದ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ನಡೆಸಲಾಗುತ್ತಿದೆ.

ವೇದಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ನೇತೃತ್ವದಲ್ಲಿ ಕಳೆದ 8 ದಿನಗಳಿಂದ ನಡೆಯುತ್ತಿರುವ ಈ ಶಿಬಿರದಲ್ಲಿ ಇಪ್ಪತ್ತಕ್ಕೂ ಹೆಚ್ಚು ವಟುಗಳು ಪಾಲ್ಗೊಂಡಿರುತ್ತಾರೆ. ವೇದ ಅಧ್ಯಯನ, ಭಗವದ್ಗೀತೆ ಹಾಗೂ ಶ್ರೀ ವಿಷ್ಣು ಸಹಸ್ರನಾಮ ಹೇಳಿಕೊಡಲಾಗುತ್ತಿದೆ. ವೇದ ಶಿಕ್ಷಕರುಗಳಾಗಿ ಡಿ.ಕೆ. ಸತ್ಯನಾರಾಯಣಮೂರ್ತಿ, ದತ್ತಾತ್ರೇಯ ಜೋಶಿ, ಪುಟ್ಟಸ್ವಾಮಿ, ಹರೀಶ್, ಸುಬ್ರಮಣ್ಯ ಶರ್ಮ ಭಗವದ್ಗೀತೆಯನ್ನು ಹೇಳಿಕೊಡುತ್ತಿದ್ದು, ಶ್ರೀಮತಿ ಸಾವಿತ್ರಿ ಭಟ್ ಹಾಗೂ ವಿಷ್ಣು ಸಹಸ್ರನಾಮ ಶ್ರೀಮತಿ ಡಾ. ರೂಪ ಶಶಿಕಾಂತ್ ಅವರು ಹೇಳಿಕೊಡುತ್ತಿದ್ದಾರೆ. ತಾಲ್ಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಡಾ. ಶಶಿಕಾಂತ್, ವಿನಾಯಕ ಜೋಶಿ, ಬಾಲಕೃಷ್ಣ ವೈದ್ಯ, ಎಸ್. ಪಿ. ಸತ್ಯನಾರಾಯಣ ರಾವ್, ಗೋಪಾಲ್ ರಾವ್, ರಾಮಚಂದ್ರರಾವ್ ಇವರುಗಳು ಶಿಬಿರದ ಉಸ್ತುವಾರಿ ವಹಿಸಿದ್ದಾರೆ.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಪಿ.ಸಿ. ರಾಮನಾಥ್ ಹಾಗೂ ಜಿಲ್ಲಾ ಕಾರ್ಯದರ್ಶಿ ಅನಿಲ್ ಬಾರೆಂಗಳ ಉಪಸ್ಥಿತರಿದ್ದರು.

## ರಸ್ತೆ ಕಾಮಗಾರಿ ಅಪೂರ್ಣ : ವಾಹನ ಸವಾರರಿಗೆ ಸಂಕಷ್ಟ



**ಗುತ್ತಿಗೆದಾರರಿಗೆ ಈಗಾಗಲೇ ನೋಟಿಸ್ ನೀಡಿ, ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿದ್ದೇವೆ ಮತ್ತು ಶೀಘ್ರವೇ ಪರ್ಯಾಯ ವ್ಯವಸ್ಥೆಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು.**
**- ಎಇಇ ಶಿವಮೂರ್ತಿ**

ಮಲೇಬೆನ್ನೂರು, ಮೇ 17- ಕಡರನಾಯ್ಕನ ಹಳ್ಳಿಯಿಂದ ಕೊಕ್ಕ ನೂರು, ಜಿ.ಟಿ ಕಟ್ಟೆ ಮಾರ್ಗವಾಗಿ ಮೂಗಿನಗೊಂದಿಗೆ ಸಂಪರ್ಕಿಸುವ ರಸ್ತೆ ಕಾಮಗಾರಿ ಅಪೂರ್ಣ ವಾಗಿದ್ದು, ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ರಾಯಚೂರು ಮೂಲದ ಗುತ್ತಿಗೆದಾರ ವಿರುಪಾಕ್ಷಪ್ಪ ಬಳೆ ಅವರು ಈ ಕಾಮಗಾರಿಯನ್ನು 4.75 ಕೋಟಿ ರೂ.ಗಳಿಗೆ ಟೆಂಡರ್ ಪಡೆದು, ಸಕಾಲಕ್ಕೆ ಕಾಮಗಾರಿ ಪೂರ್ಣಗೊಳಿಸದೇ ಅರ್ಧಕ್ಕೇ ನಿಲ್ಲಿಸಿದ್ದಾರೆ.

ಕಾಮಗಾರಿ ಪ್ರಾರಂಭವಾಗಿ 2 ವರ್ಷಗಳೇ ಕಳೆದರೂ, ರಸ್ತೆ ಪೂರ್ಣಗೊಂಡಿಲ್ಲ. ಗುತ್ತಿಗೆದಾರನು ಇಚ್ಛೆ ಬಂದಾಗ ಬಂದು ಅಲ್ಪ ಸ್ವಲ್ಪ ಕಾಮಗಾರಿ ಮಾಡಿ ನಾಪತ್ತೆ ಆಗುತ್ತಾನೆ ಎಂದು ಕೊಕ್ಕನೂರು ಮತ್ತು ಕೆ.ಎನ್ ಹಳ್ಳಿ ಗ್ರಾಮಸ್ಥರು ದೂರಿದರು. ರಸ್ತೆಗೆ ಹಾಕಿದ ಜಲ್ಲಿ ಕಲ್ಲುಗಳು ಎದ್ದ ಪರಿಣಾಮ ಭತ್ತದ ಹುಲ್ಲಿನ ಲೋಡ್ ತರಲು ಕಷ್ಟವಾಗುತ್ತಿದ್ದು, ವಾಹನ ಸವಾರರು ಇಲ್ಲಿ ಸಂಚರಿಸಲು ನಿತ್ಯವೂ ಪರದಾಡುವಂ ತಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿದ್ದಾರೆ.

ರಸ್ತೆಯ ಒಂದೆಡೆ ಜಲ್ಲಿ ಕಲ್ಲು ಹರಡಿದರೆ ಮತ್ತೊಂದೆಡೆ ಜಲ್ಲಿ ಕಲ್ಲಿನ ಗುಡ್ಡೆ ಹಾಕಿದ್ದಾರೆ ಮತ್ತು ಕೆಲವೆಡೆ ಕಳಪೆ ಮಣ್ಣು ಹಾಕಿರುವ ಪರಿಣಾಮ ದ್ವಿಚಕ್ರ ವಾಹನ ಸವಾರರು ಆಯಾ ತಪ್ಪಿ ಬಿದ್ದು ಗಾಯ ಮಾಡಿಕೊಂಡ ಘಟನೆ ಸಂಭವಿಸುತ್ತಿವೆ.

ಕೂಡಲೇ ಕಾಮಗಾರಿ ಪೂರ್ಣಗೊಳಿಸದೇ ಇದ್ದಲ್ಲಿ, ಲೋಕೋಪಯೋಗಿ ಇಲಾಖೆಗೆ ಮುತ್ತಿಗೆ ಹಾಕಿ ಧರಣಿ ಮಾಡುವುದಾಗಿ ಕೊಕ್ಕನೂರಿನ ದಾಸರ ಸೋಮಶೇಖರ್ ಮತ್ತು ಜಿ.ಟಿ ಕಟ್ಟೆ ರಮೇಶ್ ಎಚ್ಚರಿಕೆ ನೀಡಿದ್ದಾರೆ.

## 48 ಗಂಟೆಗಳಲ್ಲೇ ಮತದಾನದ ವಿವರ : ಆಯೋಗಕ್ಕೆ ನೋಟಿಸ್

ನವದೆಹಲಿ, ಮೇ 17 – ಚುನಾವಣೆ ಪೂರ್ಣಗೊಂಡ 48 ಗಂಟೆಗಳಲ್ಲಿ ಮತಗಟ್ಟೆವಾರು ಮತದಾನದ ವಿವರಗಳನ್ನು ಪ್ರಕಟಿಸಬೇಕು ಎಂಬ ಅರ್ಜಿಯ ಹಿನ್ನೆಲೆಯಲ್ಲಿ, ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ನೋಟಿಸ್ ಕಳಿಸಿದೆ. ಸರ್ಕಾರೇತರ ಸಂಘಟನೆಯಾದ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಈ ಅರ್ಜಿ ದಾಖಲಿಸಿದೆ. ಒಂದು ವಾರದಲ್ಲಿ ಪ್ರತಿಕ್ರಿಯೆ ನೀಡುವಂತೆ ಚುನಾವಣಾ ಆಯೋಗಕ್ಕೆ ತಿಳಿಸಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಮೇ 24ಕ್ಕೆ ಮುಂದೂಡಿದೆ.

## ಭದ್ರತಾ ಸಿಬ್ಬಂದಿಗೆ ಮಲಿವಾಲ್ ಎಚ್ಚರಿಸುವ ವಿಡಿಯೋ ಬಹಿರಂಗ

ನವದೆಹಲಿ, ಮೇ 17 – ಆಮ್ ಆದ್ಮಿ ಪಾರ್ಟಿ ಸಂಸದೆ ಸ್ವಾತಿ ಮಲಿವಾಲ್ ಅವರು ಭದ್ರತಾ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಳ್ಳುವ ಹಾಗೂ ಅವರ ಜೊತೆ ವಾಗ್ವಾದ ನಡೆಸುವ ಒಂದು ನಿಮಿಷದ ವಿಡಿಯೋ ಒಂದು ಬೆಳಕಿಗೆ ಬಂದಿದೆ.

ಮುಖ್ಯಮಂತ್ರಿ ನಿವಾಸದಲ್ಲಿನದು ಎನ್ನಲಾದ ವಿಡಿಯೋದಲ್ಲಿ ಸಂಸದೆ ಮಲಿವಾಲ್ ಅವರು ಹೊರ ಹೋಗುವಂತೆ ಭದ್ರತಾ ಸಿಬ್ಬಂದಿ ಕೇಳುತ್ತಿರುವ ದೃಶ್ಯವಿದೆ. ನನ್ನ ಮುಟ್ಟಿದರೆ ನಿನ್ನ ಉದ್ಯೋಗ ಕಸಿದುಕೊಳ್ಳುತ್ತೇನೆ ಎಂದು ಸಂಸದೆ ಮಲಿವಾಲ್ ಹೇಳಿದ್ದಾರೆ.

ನಾನು ಪೊಲೀಸ್ ನಿಯಂತ್ರಣ ಕೇಂದ್ರಕ್ಕೆ ಕರೆ ಮಾಡಿದ್ದೇನೆ. ಪೊಲೀಸರು ಬರುವವರೆಗೂ ಇರುತ್ತೇನೆ. ನಾನು ಎಲ್ಲರಿಗೂ ಹೇಳುತ್ತೇನೆ, ನಿಮ್ಮ ಡಿ.ಸಿ.ಪಿ. ಜೊತೆ ಮಾತನಾಡಲು ಬಿಡಿ ಎಂದು ಮಲಿವಾಲ್ ಹೇಳಿದ್ದಾರೆ.

ನನ್ನನ್ನು ಹೊರ ಹಾಕುವ ಧೈರ್ಯ ತೋರಿಸಿ ಎಂದು ಸಂಸದೆ ಭದ್ರತಾ ಸಿಬ್ಬಂದಿಗೆ ಸವಾಲು ಹಾಕಿದ್ದಾರೆ. ನಾವು ಅಂತಹ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಭದ್ರತಾ ಸಿಬ್ಬಂದಿ ಹೇಳಿರುವುದು 52 ಸೆಕೆಂಡುಗಳ ವಿಡಿಯೋದಲ್ಲಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರು ಮುಖ್ಯಮಂತ್ರಿ ಅಧಿಕೃತ ನಿವಾಸದಲ್ಲಿ ನನ್ನ ಮೇಲೆ ಹಲ್ಲೆ ನಡೆಸಿದ್ದಾಗಿ ಮಲಿವಾಲ್ ಹೇಳಿದ್ದರು.

ಈ ಬಗ್ಗೆ ಟ್ವೀಟ್ ಮಾಡಿರುವ ಆಮ್ ಆದ್ಮಿ ಪಾರ್ಟಿ, ಸ್ವಾತಿ ಮಲಿವಾಲ್ ಅವರ ಸತ್ಯ ಬಯಲಾಗಿದೆ. ಸ್ವಲ್ಪ ಬೆಳಕಿನಿಂದಲೇ ಸುಳ್ಳು ಹಾಗೂ ಉದ್ಧಟತನದ ಕತ್ತಲೆ ದೂರುವಾಗುತ್ತದೆ ಎಂದು ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮಲಿವಾಲ್, ಯಾವುದೋ ಸಂಬಂಧವಿಲ್ಲದ ವಿಡಿಯೋ ಬಿಡುಗಡೆ ಮಾಡಲಾಗುತ್ತಿದೆ. ಸಿಸಿಟಿವಿ ವಿಡಿಯೋ ಪರಿಶೀಲನೆಯ ನಂತರ ಸತ್ಯ ಬಯಲಿಗೆ ಬರಲಿದೆ ಎಂದಿದ್ದಾರೆ.

## ರೈತರ ಸಾವಿಗೆ ಸ್ಪಂದಿಸಿ : ರವೀಂದ್ರಗೌಡ



**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 17 - ರೈತರ ಸಮಸ್ಯೆ ಮತ್ತು ಆತ್ಮಹತ್ಯೆಯ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸ್ಪಂದಿಸದಿರುವುದನ್ನು ಖಂಡಿಸಿ ಕರೂರು ಗ್ರಾಮಸ್ಥರೊಂದಿಗೆ ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ್ ಶವದೊಂದಿಗೆ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಕರೂರು ಗ್ರಾಮದ ಸೋಮಪ್ಪ ಕರಿಹನುಮಪ್ಪ ಹೊಸಮನಿ ತನ್ನ ರೇಷ್ಮೆ ಸಾಕಾಣಿಕಾ ಚಪ್ಪರದಲ್ಲಿ ನೇಣಿಗೆ ಶರಣಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ ಮೃತನ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡುವ ಜತೆಗೆ ಮೃತನ ಹೆಂಡತಿಗೆ 15 ಸಾವಿರ ಮಾಸಾಶನ, ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಆಗುವವರೆಗೆ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ. ಆದ್ದರಿಂದ ಸರ್ಕಾರವು ಸಾಲ ಮನ್ನಾ ಮಾಡಿ, ರೈತರ ಜೀವ ಉಳಿಸಬೇಕೆಂದು ಮನವಿ ಮಾಡಿದ್ದಾರೆ.

ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ಮೃತನ ಜಮೀನು ರಾಮ್ಕೋ ಸಿಮೆಂಟ್ ಫ್ಯಾಕ್ಟರಿಗೆ ಹೋಗಿದ್ದು, ಮೃತನ ಹಿರಿಯ ಮಗನಿಗೆ ಈ ಕಂಪನಿಯಲ್ಲಿ ನೌಕರಿ ಕೊಡುವವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯಲ್ಲ ಎಂದು ಪಟ್ಟು ಹಿಡಿದಿದ್ದಕ್ಕೆ, ಫ್ಯಾಕ್ಟರಿಯ ಮುಖ್ಯಸ್ಥರು ಕೆಲಸ ಕೊಡುವ ಭರವಸೆ ನೀಡಿದರು.

ಮೃತನ ಶವ ಹೆದ್ದಾರಿಯಲ್ಲಿಟ್ಟು ಪ್ರತಿಭಟಿಸುವುದಾಗಿ ಎಚ್ಚರಿಸಿದಾಗ ಬಂದ ತಹಶೀಲ್ದಾರ್ ಟಿ. ಸುರೇಶ್ ಕುಮಾರ್ ಹಾಗೂ ಸಹಾಯಕ ಕೃಷಿ ನಿರ್ದೇಶಕಿ ಶಾಂತಮಣಿ ಹಲಗೇರಿ ಪಿಎಸ್‌ಐ ಸುನೀಲ್ ಕುಮಾರ ನಾಯಕ ಅವರಿಗೆ ಮನವಿ ಸಲ್ಲಿಸಿದರು.

### ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ. ದಾವಣಗೆರೆ.

**ಅಸಲು ದಾವೆ ನಂ. 342/2021**

ವಾದಿಯರು : ಶ್ರೀಮತಿ ಛಾಯಾದೇವಿ ಮತ್ತು ಮತ್ತೊಬ್ಬರು -ವಿರುದ್ಧ-
ಪ್ರತಿವಾದಿಯರು : ಶ್ರೀ ಕೆ.ಎಂ. ಭೋಜರಾಜ ಮತ್ತು ಇತರರು

**ವಾದಿಯರ ಪರ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ದಾವೆಯ ವಾದಿಯರಾದ ಶ್ರೀಮತಿ ಛಾಯಾದೇವಿ ಕೋಂ. ವೀರೇಶ್, ವಯಸ್ಸು 37 ವರ್ಷ, ಗೃಹಿಣಿ : ವಾಸ : # 774, ರಿಂಗ್ ರೋಡ್ ಹಿಂಭಾಗ, ಎಸ್.ಪಿ.ಎಸ್. ನಗರ, 2ನೇ ಹಂತ, ದೇವರಾಜ ಅರಸು ಬಡಾವಣೆ, ದಾವಣಗೆರೆ ಸಿಟಿ ಮತ್ತು ಶ್ರೀಮತಿ ಎಂ. ವಿಶಾಲಾಕ್ಷಿ ಕೋಂ. ಕೆ.ಹೆಚ್. ಸಂಪತ್‌ಕುಮಾರ್, ವಯಸ್ಸು 35 ವರ್ಷ, ಗೃಹಿಣಿ : ವಾಸ : ಹಾಲಿವಾಣ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಪ್ರತಿವಾದಿ ನಂ. 1 ಶ್ರೀ ಕೆ.ಎಂ. ಭೋಜರಾಜ ಬಿನ್ ಲೇಟ್ ಮಂಜುನಾಥಪ್ಪ ಕೆ.ವಿ., ವಯಸ್ಸು 32 ವರ್ಷ, ವಾಸ : #87 ಉತ್ತರ ಬ್ಲಾಕ್, ಇ.ಡಬ್ಲ್ಯೂ.ಎಸ್. ಕಾಲೋನಿ, 1ನೇ ಡಿವಿಜನ್, 9ನೇ ವಾರ್ಡ್, 1ನೇ ಮೇನ್, 3ನೇ ಕ್ರಾಸ್, ದಾವಣಗೆರೆ ಸಿಟಿ ಮತ್ತು ಇತರರ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗಳ ಮೇಲೆ 1/3ನೇ ಭಾಗ ಪಾಲು ಕೇಳಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಪ್ರತಿವಾದಿ ನಂ. : 1 ಆದ ನಿಮಗೆ ನ್ಯಾಯಾಲಯದ ಸಮನ್ಸ್, ನೋಟೀಸ್ ಇತ್ಯಾದಿ ತಲುಪದೇ ವಾಪಸ್ಸು ಬಂದಿರುತ್ತದೆ.

ಸದರಿ ಈ ದಾವೆಯಲ್ಲಿ ಮಾನ್ಯ ನ್ಯಾಯಾಲಯದವರು ದಿನಾಂಕ : 7.2.2024 ರಂದು ವಾದ ಪತ್ರದ ತಿದ್ದುಪಡಿಯ ವಾದಿಯರ ಮಧ್ಯಂತರ ಅರ್ಜಿಯ ಮೇಲೆ ನೀವು ಅಂದರೆ ಶ್ರೀ ಕೆ.ಎಂ. ಭೋಜರಾಜ ಬಿನ್ ಲೇಟ್ ಮಂಜುನಾಥಪ್ಪ ಕೆ.ವಿ. ದಿನಾಂಕ : 03.07.2024 ರಂದು ಮುದ್ದತ್ತಿಗೆ ಖುದ್ದು ತಾವಾಗಲೀ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ ತಮ್ಮ ದಾವೆಯಲ್ಲಿ ಹಾಜರಾಗಿ ವಾದ ಪತ್ರದ ತಿದ್ದುಪಡಿಯ ಅರ್ಜಿಗೆ ತಮ್ಮ ಅಹವಾಲು ಅಥವಾ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ನಿಮ್ಮದು ಯಾವುದೇ ರೀತಿಯ ಸದರಿ ಅರ್ಜಿಗೆ ತಮ್ಮ ಅಹವಾಲು ಅಥವಾ ತಕರಾರು ಇರುವುದಿಲ್ಲ ಎಂದು ಭಾವಿಸಿ ಏಕಪಕ್ಷೀಯವಾಗಿ ನ್ಯಾಯಾಲಯವು ಸದರಿ ವಾದ ಪತ್ರದ ತಿದ್ದುಪಡಿ ಅರ್ಜಿಯ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳ ಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 6.5.2024 ರಂದು ಕೊಡಲ್ಪಟ್ಟಿದೆ.

**ಸಹಿ/- ಇ. ಫಯಾಜ್**
**ವಾದಿಯರ ಪರ ವಕೀಲರು,**
**ದಾವಣಗೆರೆ**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ದಾವಣಗೆರೆ.**

### ಪುರಸಭಾ ಕಾರ್ಯಾಲಯ, ಹರಪನಹಳ್ಳಿ-583131. ವಿಜಯನಗರ ಜಿಲ್ಲೆ

ಕರ್ನಾಟಕ ಸರ್ಕಾರ

ದೂರವಾಣಿ ಸಂಖ್ಯೆ : 08398-280258
ಫ್ಯಾಕ್ಸ್ ಸಂಖ್ಯೆ : 08398-280581
e-mail : itstaff_ulb_harapanahalli@yahoo.com
Website : harapanahallitown.mrc.gov.in

ಕ್ರ.ಸಂ:ಪುಸ:ಹ.ಹಳ್ಳಿ/ಕಂ.ಶಾ/ಸಿಆರ್/ /2024-25 ದಿನಾಂಕ : 17.05.2024.

**ಸಾರ್ವಜನಿಕ ಪ್ರಕಟಣೆ**

ಈ ಕೆಳಕಂಡ 09ನೇ ವಾರ್ಡ್ ದೊಡ್ಡಗರಡಿಕೇರಿಯಲ್ಲಿ ಬರುವ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ, ನಮೂನೆ-3 ನೀಡುವ ಬಗ್ಗೆ ಅರ್ಜಿದಾರರಾದ ಶ್ರೀ ಬಾಣದ ದುರುಗಪ್ಪ ತಂದೆ ಹನುಮಪ್ಪ ಇವರು ಈ ಕಚೇರಿಗೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಕಛೇರಿ ದಾಖಲಾತಿಗಳಲ್ಲಿ ಅಳತೆ ಲಭ್ಯವಾಗದ ಪ್ರಯುಕ್ತ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಲಭ್ಯವಾದ ಅಳತೆಯನ್ನು ತೆರಿಗೆಯನ್ನು ನಿರ್ಧರಿಸಿ ವಸೂಲಿ ಮಾಡುವ ಸಲುವಾಗಿ ಕಚೇರಿ ವಹಿಯಲ್ಲಿ ನಮೂದಿಸಿ. ಮುಂದುವರೆಸುವ ಬಗ್ಗೆ ಅಕ್ಕ-ಪಕ್ಕದ ಹಾಗೂ ಹಕ್ಕು ಬಾಧ್ಯತೆಯುಳ್ಳವರು ಪ್ರಕಟಣೆಗೊಂಡ ದಿನಾಂಕದಿಂದ 15 ದಿನದೊಳಗಾಗಿ ದೃಢೀಕರಿಸುವ ದಾಖಲೆಗಳೊಂದಿಗೆ ಲಿಖಿತವಾಗಿ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಸಲ್ಲಿಸಲು ಕೋರಿದೆ. ಒಂದು ವೇಳೆ ನಿಗದಿತ ಅವಧಿಯಲ್ಲಿ ಯಾವುದೇ ರೀತಿಯ ತಕರಾರು / ಆಕ್ಷೇಪಣೆಗಳು ಬಾರದೇ ಇದ್ದ ಪಕ್ಷದಲ್ಲಿ ಪುರಸಭೆ ಕಾಯ್ದೆಯನ್ವಯ ಸ್ಥಳದಲ್ಲಿ ಲಭ್ಯವಾದ ಅಳತೆಗಳನ್ನು ನಮೂದಿಸಿ ಅರ್ಜಿದಾರರ ಕೋರಿಕೆಯಂತೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಹಾಗೂ ಅವಧಿ ಮೀರಿ ಬರುವ ಯಾವುದೇ ರೀತಿಯ ಲಿಖಿತ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

**-: ಷೆಡ್ಯೂಲ್ :-**

| ಕ್ರ.ಸಂ. | ಆಸ್ತಿ ಸಂಖ್ಯೆ | ನಮೂದಿಸ ಬೇಕಾದ ಅಳತೆ | -: ಚೆಕ್ಕುಬಂದಿ :- | |
|---|---|---|---|---|
| 1. | 73/1 | ಪೂ-ಪ 15 ಅಡಿ X ಉ-ದ 28 ಅಡಿ | ಪೂ | ತಿರುಗಾಡಲು ಬಿಟ್ಟಿರುವ ಜಾಗ |
| | | | ಪ | ಬಿ. ದಾದಪ್ಪ ಇವರ ಮನೆ |
| | | | ಉ | ದಾರಿ |
| | | | ದ | ಕೆ. ಸಣ್ಣ ಹಾಲಪ್ಪರ ಮನೆ |

**ಸಹಿ/-**
**ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ**

# ಡೆಂಗ್ಯೂ ನಿಯಂತ್ರಣ ಅರಿವು ಜನರಿಗಿರಲಿ



## ರಾಷ್ಟ್ರೀಯ ಡೆಂಗ್ಯೂ ನಿಯಂತ್ರಣ ಜಾಗೃತಿ ಜಾಥಾದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ

ದಾವಣಗೆರೆ, ಮೇ 17 - ಡೆಂಗ್ಯೂ ನಿಯಂತ್ರಣದ ಬಗ್ಗೆ ಜನರಿಗೆ ಜಾಗೃತಿ ಇದ್ದಾಗ ರೋಗವನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಡೆಂಗ್ಯೂ ನಿಯಂತ್ರಣ ಕುರಿತು ಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿ ಮಾತನಾಡಿದರು.

ನಿಂತ ನೀರು ಸೊಳ್ಳೆಗಳ ತವರು, ಡೆಂಗಿ ಜ್ವರ ಈಡಿಸ್ ಎಂಬ ಸೊಳ್ಳೆಯಿಂದ ಹರಡುತ್ತದೆ, ನೀರಿನ ಸಂಗ್ರಹದ ಪರಿಕರಗಳನ್ನು ವಾರಕ್ಕೆ ಎರಡು ಬಾರಿ ಸ್ವಚ್ಚಗೊಳಿಸಿ, ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ, ನೀರಿನ ಪರಿಕರಗಳಲ್ಲಿನ ಬಾಲಹುಳುಗಳೇ ಸೊಳ್ಳೆ, ಇವುಗಳ ಉತ್ಪತ್ತಿಯನ್ನು ನಿಯಂತ್ರಣದಲ್ಲಿಟ್ಟು ಆರೋಗ್ಯ ಇಲಾಖೆಯೊಂದಿಗೆ ಕೈ ಜೋಡಿಸಿ ಡೆಂಗ್ಯೂ ಮಹಾಮಾರಿಯನ್ನು ಸೋಲಿಸಿ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಕೆ.ಎಚ್. ಗಂಗಾಧರ್, ದಾವಣಗೆರೆ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ದೇವರಾಜ್ ಪಟಾಗೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಅಧೀಕ್ಷಕರು ಡಾ. ಮಧು, ಡಾ. ಸುರೇಶ್ ಬಾರ್ಕಿ ಡಿಹೆಚ್‌ಓ, ಡಾ. ರೇಣುಕಾ ಆರಾಧ್ಯ ಆರ್.ಸಿ.ಎಚ್, ಡಾ. ರಾಘವನ್ ಡಿಎಸ್‌ಓ, ಡಾ. ರುದ್ರಸ್ವಾಮಿ ಎಫ್‌ಡಬ್ಲ್ಯೂಓ ಹಾಗೂ ಇತರರು ಭಾಗವಹಿಸಿದ್ದರು.

# ಕರ್ನಾಟಕದ ಏಕನಾಥ ಶಿಂಧೆ ಯಾರು?

ಬೆಂಗಳೂರು, ಮೇ 17 - ಕರ್ನಾಟಕದ ಏಕನಾಥ ಶಿಂಧೆ ಯಾರು ಎಂಬ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಎಡೆ ಮಾಡಿದೆ. ಲೋಕಸಭಾ ಚುನಾವಣಾ ಫಲಿತಾಂಶ ಹೊರಬರುತ್ತಿದ್ದಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಮಹಾರಾಷ್ಟ್ರದ ಮಾದರಿಯಲ್ಲಿ ತೆಗೆಯುತ್ತೇವೆ ಎಂದು ಅಲ್ಲಿನ ಮುಖ್ಯಮಂತ್ರಿ ಶಿಂಧೆ ನೀಡಿರುವ ಹೇಳಿಕೆ ಸಂಚಲನಕ್ಕೆ ಕಾರಣವಾಗಿತ್ತು.

ಎನ್‌ಡಿಎ ಮೈತ್ರಿಕೂಟದ ಜೊತೆ ಜೆಡಿಎಸ್ ಕೈಜೋಡಿಸಿದ ನಂತರ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಸಂಚು ಕಳೆದ ಐದು ತಿಂಗಳಿಂದಲೂ ನಡೆಯುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಇದೀಗ ಅದಕ್ಕೆ ಬಿರುಸಿನ ಚಾಲನೆ ದೊರೆತಂತಿದೆ, ಕಾಂಗ್ರೆಸ್‌ನಲ್ಲಿ ಮೇಲ್ನೋಟಕ್ಕೆ ಒಗ್ಗಟ್ಟು ಕಂಡುಬಂದರೂ ಒಳಗಿಂದೊಳಗೆ ಎಲ್ಲವೂ ಸರಿ ಇಲ್ಲ ಎಂದೂ ಹೇಳಲಾಗುತ್ತಿದೆ.

ಇದರ ಬೆನ್ನಲ್ಲೇ ಎಐಸಿಸಿ ಕೂಡ ಸರ್ಕಾರ ತೆಗೆಯಲು ಬಿಜೆಪಿ ವರಿಷ್ಠರು ಯಾವ ಹಂತಕ್ಕಾದರೂ ಹೋಗಬಹುದು ನೀವು ಎಚ್ಚರಿಕೆಯಿಂದಿರಿ ಎಂಬ ಸಂದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರವಾನೆ ಮಾಡಿದೆ.

ಪಕ್ಷದ ಕೆಲವು ಶಾಸಕರು ಮತ್ತು ಸಚಿವರನ್ನು ಗೋವಾ ಹಾಗೂ ಮಹಾರಾಷ್ಟ್ರದ ಎನ್‌ಡಿಎ ಕೂಟದ ಮುಖಂಡರುಗಳು ಸಂಪರ್ಕದಲ್ಲಿರಿಸಿ ಕೊಂಡಿದ್ದಾರೆ. ನೀವು 80ಕ್ಕೂ ಹೆಚ್ಚು ಶಾಸಕರಿಗೆ ಸಂಪುಟ ದರ್ಜೆಯ ವಿವಿಧ ಹುದ್ದೆಗಳನ್ನು ನೀಡಿದ್ದರೂ ಅವರಲ್ಲೂ ಅಸಮಾಧಾನಿತ ರಿರಬಹುದು, ಜೊತೆಗೆ ಅಧಿಕಾರ ದೊರೆಯದವರೂ ಹುದ್ದೆಗೆ ಪರಿತಪಿಸಬಹುದು.

ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜೊತೆಗೆ ಅವರ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸಂದೇಶ ಬಂದಿದೆ.

ಇದರ ಬೆನ್ನಲ್ಲೇ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲಾಖಾ ಪ್ರಧಾನ ಕಾರ್ಯದರ್ಶಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿ, ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳಿ ಎಂದಿದ್ದಾರೆ.

ಚುನಾವಣಾ ಮಾದರಿ ನೀತಿ ಸಂಹಿತೆ ಮುಗಿಯುತ್ತಿದ್ದಂತೆ ಆದೇಶಗಳು ಹೊರಬರಲಿವೆ ಮತ್ತು ಅನುದಾನವನ್ನು ತಕ್ಷಣವೇ ಬಿಡುಗಡೆ ಮಾಡಿ ಎಂದು ಸಲಹೆ ಮಾಡಿದ್ದಾರೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ ಒತ್ತು ನೀಡಿದ್ದರಿಂದ ಶಾಸಕರ ನಿಧಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ನೀಡಲು ಸಾಧ್ಯವಾಗಲಿಲ್ಲ.

ಇದನ್ನು ಅರಿತ ಮುಖ್ಯಮಂತ್ರಿ ಅವರು, ಕಳೆದ ಮುಂಗಡ ಪತ್ರದಲ್ಲಿ ಒಂದು ಲಕ್ಷ ಕೋಟಿ ರೂ. ಸಾಲ ಪಡೆದು ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುವುದರ ಜೊತೆಗೆ ಅಭಿವೃದ್ಧಿ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಅಷ್ಟೇ ಅಲ್ಲ 3 ಲಕ್ಷ ಕೋಟಿ ರೂ.ನಷ್ಟು ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿಯೂ ಹೇಳಿದ್ದಾರೆ.

ಅವರು ಬಜೆಟ್ ಮಂಡನೆ ಮಾಡಿ ಅನುಮೋದನೆ ಪಡೆಯುತ್ತಿದ್ದಂತೆ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡಿತು.

ಇದರಿಂದ ಬಜೆಟ್‌ನ ಕಾರ್ಯಕ್ರಮಗಳು ಆದೇಶದ ರೂಪದಲ್ಲಿ ಹೊರಬರಲು ಸಾಧ್ಯವಾಗಲಿಲ್ಲ. ಅಭಿವೃದ್ಧಿ ಆಗುತ್ತಿಲ್ಲ, ಕ್ಷೇತ್ರಕ್ಕೆ ಹಣ ನೀಡುತ್ತಿಲ್ಲ ಎಂಬ ಅಸಮಾಧಾನ ಶಾಸಕರಲ್ಲಿ ವ್ಯಾಪಕವಾಗಿ ಕೇಳಿಬಂದಿದೆ.

ಇದು ನಮಗೆ ಮುಳುವಾಗಬಾರದೆಂಬ ಉದ್ದೇಶದಿಂದ ಮುಖ್ಯಮಂತ್ರಿ ಅವರು ಅಧಿಕಾರಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿ ಹಣ ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳಿ ಎಂದಿದ್ದಾರೆ.

# ಅಫ್ಸಾನ ಬಾನುಗೆ ಮುಸ್ಲಿಂ ನೌಕರರ ಸಂಘದಿಂದ ಸನ್ಮಾನ



### ಹರಪನಹಳ್ಳಿ

ಹರಪನಹಳ್ಳಿ, ಮೇ 17 - ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಮೂರನೇ ಸ್ಥಾನ ಪಡೆದಿರುವ ಪಿ. ಅಫ್ಸಾನ ಬಾನು ಅವರನ್ನು ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಮುಖಂಡರಾದ ಎಸ್.ಕೆ.ಸಮಿಉಲ್ಲಾ, ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಅಧ್ಯಕ್ಷ ಉಸ್ಮಾನ್ ಕೆ. ಎಸ್., ಜಿಲ್ಲಾಧ್ಯಕ್ಷ ಷರೀಫ್ ಮಕರಬ್ಬಿ, ಕಾರ್ಯದರ್ಶಿ ಸಲೀಂ, ನಿರ್ದೇಶಕರಾದ ಅರ್ಜುಮುನ್ನೀಸ, ಜಿಲ್ಲಾ ಪದಾಧಿಕಾರಿಗಳಾದ ಎಂ ಯಾಹ್ಯಾ, ಜಮಾಲುದ್ದೀನ್, ಎನ್. ಇಸ್ಮಾಯಿಲ್, ಅಬ್ದುಲ್ ಸಲಾಂ, ಸಿ ಆರ್ ಪಿ ಹೆಚ್ ಫೀರಾ ಸಾಬ್, ಮಕರಬ್ಬಿ ದಾದಾಪೀರ್, ಅಮಾನುಲ್ಲಾ ಕುಂಚೂರು, ಎಸ್ ನಜೀರ್, ದಾದಾಪೀರ್ ಕಲಾರಿ, ಡಿ. ಶಫಿ ಉಲ್ಲಾ, ಹೆಚ್ ಅಲ್ಲಾಭಕ್ಷ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಸ್. ಕೆ. ಸಮೀವುಲ್ಲಾ ಸನ್ಮಾನಿಸಿದರು. ಉಸ್ಮಾನ್ ಕೆ. ಎಸ್, ಷರೀಫ್ ಮಕರಬ್ಬಿ, ಹೆಚ್. ಸಲೀಂ, ಎ. ಎಂ. ಯಾಹ್ಯಾ ಜಮಾಲುದ್ದೀನ್, ಎನ್ ಇಸ್ಮಾಯಿಲ್, ಅಬ್ದುಲ್ ಸಲಾಂ, ಪೀರಾ ಸಾಹೇಬ, ಮಕರಬ್ಬಿ ದಾದಾಪೀರ್ ಸೇರಿದಂತೆ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಹುಬ್ಬಳ್ಳಿ ಕೊಲೆ ಪ್ರಕರಣಗಳು : ಎಡಿಜಿಪಿ ವರದಿಗೆ ಸೂಚನೆ

ಬೆಂಗಳೂರು, ಮೇ 17 - ಹುಬ್ಬಳ್ಳಿ-ಧಾರವಾಡದಲ್ಲಿ ಪದೇ ಪದೇ ಸಂಭವಿಸುತ್ತಿರುವ ಕೊಲೆ ಪ್ರಕರಣಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ಎಡಿಜಿಪಿ ಅವರಿಗೆ ಸೂಚಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪದೇ ಪದೇ ಕೊಲೆ ಘಟನೆಗಳು ಸಂಭವಿಸುತ್ತಿವೆ. ಇದಕ್ಕೆ ಕಾರಣ ಏನು, ಯಾವ ವಿಷಯ ಎಂಬುದನ್ನು ಗುರುತಿಸಿ ವರದಿ ಸಲ್ಲಿಸಲಿದ್ದಾರೆ. ಬಳಿಕ ಸಾಧ್ಯವಾದರೆ ತಾವು ಹೋಗಿ ಬರುವುದಾಗಿ ಹೇಳಿದರು.

ಯುವತಿ ಅಂಜಲಿ ಕೊಲೆ ಪ್ರಕರಣದ ಆರೋಪಿಯನ್ನು ಬಂಧಿಸಲಾಗಿದೆ. ಕಾನೂನು ಪ್ರಕಾರ ಕಠಿಣ ಶಿಕ್ಷೆಗೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಯಾವುದೇ ಮುಲಾಜಿಲ್ಲ.

ಪೊಲೀಸರ ಲೋಪ ಕಂಡು ಬಂದ ಹಿನ್ನೆಲೆಯಲ್ಲಿ ಕೂಡಲೇ ಸಂಬಂಧಪಟ್ಟವರನ್ನು ಅಮಾನತ್ತು ಮಾಡಲಾಗಿದೆ. ಮುಂದೆ ಏನೆಲ್ಲ ಕಾನೂನು ಕ್ರಮ ತೆಗೆದುಕೊಳ್ಳಬೇಕೋ ಅವೆಲ್ಲವನ್ನು ಮಾಡುತ್ತೇವೆ ಎಂದು ಸಚಿವರು ತಿಳಿಸಿದರು.

ಪೋಷಕರು ಲಿಖಿತ ದೂರು ಕೊಟ್ಟಿಲ್ಲ, ಆದರೆ ವಿಷಯವನ್ನು ತಿಳಿಸಿದ್ದರು ಎಂಬ ವರದಿ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಅವರನ್ನು ಅಮಾನತ್ತು ಮಾಡಲಾಗಿದೆ. ಪೋಷಕರು ನಿಜವಾಗಿಯೂ ವಿಷಯ ತಿಳಿಸಿದ್ದರೆ, ಇಲ್ಲವೇ, ಎಂಬ ಕುರಿತು ತನಿಖೆ ನಡೆಯುತ್ತಿದೆ. ಇದರಲ್ಲಿ ಅಧಿಕಾರಿಗಳ ತಪ್ಪು ಕಂಡು ಬಂದರೆ ಮುಂದಿನ ಕ್ರಮ ಜರುಗಿಸಲಾಗುವುದು ಎಂದರು.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಗ್ರಾಹಕರ ಸಭೆ

ರಾಣೇಬೆನ್ನೂರಿನ ಉಪ ವಿಭಾಗ 1ರ ಕಚೇರಿಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಇಂದು ಮಧ್ಯಾಹ್ನ 3.30 ರಿಂದ 5.30 ರವರೆಗೆ ಆಯೋಜಿಸಿದ್ದು, ರಾಣೇಬೆನ್ನೂರು ನಗರ ಹಾಗೂ ಉಪವಿಭಾಗ 1ಕ್ಕೆ ಸಂಬಂಧಪಟ್ಟ ಗ್ರಾಮೀಣ ಭಾಗದ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ, ವಿದ್ಯುತ್ ಬಗೆಗಿನ ತಮ್ಮ ಅಹವಾಲನ್ನು ಸಲ್ಲಿಸಬಹುದು.

# ಹೊನ್ನಾಳಿಯಲ್ಲಿಂದು ವಿದ್ಯುತ್ ಗ್ರಾಹಕರ ಸಭೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಹೊನ್ನಾಳಿ ಉಪವಿಭಾಗ ಕಚೇರಿಯಲ್ಲಿ ಗ್ರಾಹಕರ ಕುಂದು-ಕೊರತೆ ಸಭೆಯನ್ನು ಇಂದು ಮಧ್ಯಾಹ್ನ 3 ಗಂಟೆಯಿಂದ 5.30 ರವರೆಗೆ ಗ್ರಾಹಕರ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ಸೊರೇನ್ ಜಾಮೀನಿಗಾಗಿ ಇ.ಡಿ. ಪ್ರತಿಕ್ರಿಯೆಗೆ ಸೂಚನೆ

ನವದೆಹಲಿ, ಮೇ 17 – ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡುವ ಸಲುವಾಗಿ ಜಾಮೀನು ಕೋರಿರುವ ಹಿನ್ನೆಲೆಯಲ್ಲಿ, ಜಾರಿ ನಿರ್ದೇಶನಾಲಯ ಪ್ರತಿಕ್ರಿಯೆ ದಾಖಲಿಸುವಂತೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಜಾರಿ ನಿರ್ದೇಶನಾಲಯ ಜಾಮೀನಿಗೆ ಅರ್ಜಿ ಸಲ್ಲಿಸಲಿ. ಮುಂದಿನ ವಾರ ಈ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತ ಅವರನ್ನು ಒಳಗೊಂಡ ಪೀಠ ಹೇಳಿದೆ.

# ವೈಜ್ಞಾನಿಕ ಯುಗದಲ್ಲೂ ವೈದಿಕ ಸಂಸ್ಕೃತಿ : ಡಾ.ಬಸವರಾಜ ನೆಲ್ಲಿಸರ

ದಾವಣಗೆರೆ, ಮೇ 17- ವೈಜ್ಞಾನಿಕ ಯುಗದಲ್ಲೂ ಹಲವಾರು ಮನೆ ಹಾಗೂ ಮಠಗಳಲ್ಲಿ ವೈದಿಕ ಸಂಸ್ಕೃತಿ ಜಾರಿಯಲ್ಲಿದೆ ಎಂದು ಸಂಸ್ಕೃತಿ ಚಿಂತಕ ಡಾ. ಬಸವರಾಜ ನೆಲ್ಲಿಸರ ಹೇಳಿದರು.

ಅಖಿಲ ಭಾರತ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಕಳೆದ ವಾರ ಏರ್ಪಡಿಸಿದ್ದ ಆನ್‌ಲೈನ್‌ನಲ್ಲಿ ಅರಿವಿನ ಮನೆಯ ಶರಣ ಚಿಂತನಗೋಷ್ಠಿ-7ರಲ್ಲಿ ಅವರು ಮಾತನಾಡಿದರು.

12ನೇ ಶತಮಾನದ ಬಸವಾದಿ ಶರಣರು ಜೀವ ವಿರೋಧಿಯಾದ ಸ್ಥಾವರ ತತ್ವ ಮತ್ತು ಕರ್ಮ ಸಿದ್ಧಾಂತಕ್ಕೆ ಬದಲಾಗಿ, ಜೀವ ಪರವಾದ ಜಂಗಮ ತತ್ವ ಮತ್ತು ಕಾಯಕ ಸಿದ್ಧಾಂತ ಜಾರಿಗೆ ತಂದು ಲೋಕದ ಸಕಲರಿಗೂ ಲೇಸು ಬಯಸಿದ್ದಾರೆ ಎಂದು ಹೇಳಿದರು.

ಜಾತಿ ಮತ್ತು ಧರ್ಮವನ್ನು ರಾಜಕೀಯ ಕೋಸ್ಕರ ಮಾರಾಟದ ವಸ್ತುವನ್ನಾಗಿಸಿ, ಬಡಜನತೆ ಮತ್ತು ಹಿಂದುಳಿದ ವರ್ಗದವರ ಶೋಷಣೆ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಲೋಕ ಶಾಂತಿಯಿಂದ ಇರಬೇಕಾದರೆ ಗುರಿ ಮತ್ತು ಮಾರ್ಗದ ಪವಿತ್ರ ಮುಖ್ಯ. ಈ ನಿಟ್ಟಿನಲ್ಲಿ 12ನೇ ಶತಮಾನದ ಬಸವಾದಿ ಶರಣರು ಸಹ ಗುರಿ ಮತ್ತು ಮಾರ್ಗವನ್ನು ಪವಿತ್ರತೆಯಿಂದ ಕಾಪಾಡಿ, ರಾಜಾಶ್ರಯದ ಸಾಹಿತ್ಯವನ್ನು ಜನ ಸಾಮಾನ್ಯರ ಸಾಹಿತ್ಯವನ್ನಾಗಿಸಿದ್ದರು ಎಂದು ತಿಳಿಸಿದರು.

ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವಾಧ್ಯಕ್ಷ ಡಾ.ಎಂ.ಜಿ ಈಶ್ವರಪ್ಪ ಮಾತನಾಡಿ, ಸಂಸ್ಕೃತ ಯುಗವನ್ನು ಬಸವಾದಿ ಶರಣರು ಕನ್ನಡ ಯುಗ ಮಾಡಿದರು. ಜನರಾಡುವ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಸಿ ಕೆಳವರ್ಗದ ಜನರನ್ನು ಸಮಾಜದ ಮುನ್ನೆಲೆಗೆ ಬರುವಂತೆ ಮಾಡಿದ್ದರು ಎಂದು ಹೇಳಿದರು.

ಬಸವಣ್ಣನವರು ಅನುಭವ ಮಂಟಪ ಮತ್ತು ಮಹಾಮನೆಯ ಕಲ್ಪನೆಯಿಂದ ಉತ್ತಮ ಸಮಾಜ ನಿರ್ಮಿಸಲು ಪ್ರಯತ್ನಿಸಿದ್ದರು. ಈ ನಿಟ್ಟಿನಲ್ಲಿ ಅನುಭವ ಮಂಟಪದಿಂದ ಕಲ್ಯಾಣ ರಾಜ್ಯ, ಮಹಾಮನೆಯಿಂದ ಸಮ-ಸಮಾಜ ಸೃಷ್ಟಿಯಾಯಿತು ಎಂದು ಹೇಳಿದರು.

ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ತುಮಕೂರು ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ.ಜಿ.ಸಿದ್ದರಾಮಯ್ಯ, ದೆಹಲಿ ಘಟಕದ ಅಧ್ಯಕ್ಷ ಎನ್.ಪಿ. ಚಂದ್ರಶೇಖರ್, ಡಾ. ರಣಧೀರ್, ಗೀತಾ ಬಸವರಾಜ್, ಎನ್.ಟಿ. ಸಣ್ಣಮಂಜುನಾಥ ಇದ್ದರು.

ಬಿ.ಟಿ.ಪ್ರಕಾಶ್ ಪ್ರಾರ್ಥನೆ ಮತ್ತು ವಚನ ಮಂಗಳ ನಡೆಸಿಕೊಟ್ಟರು. ಆರ್. ಸಿದ್ದೇಶಪ್ಪ ಸ್ವಾಗತಿಸಿದರು. ಧರ್ಮಪ್ಪ ಮೈಸೂರ್ ನಿರೂಪಿಸಿದರು.

# ಕೇಜ್ರಿವಾಲ್ ಆಪ್ತ ಸಹಾಯಕನಿಂದ ಹಲ್ಲೆ : ಎಫ್.ಐ.ಆರ್.ನಲ್ಲಿ ವಿವರ

ನವದೆಹಲಿ, ಮೇ 17 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ. ಪದೇ ಪದೇ ಕಪಾಳಕ್ಕೆ ಭಾರಿಸಿದ್ದಾರೆ. ಸಹಾಯಕ್ಕೆ ಕೂಗು ಹಾಕಿದಾಗಲೂ ಹಲ್ಲೆ ನಿಲ್ಲಿಸಿರಲಿಲ್ಲ ಎಂದು ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಲ್ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕೇಜ್ರಿವಾಲ್ ಅಧಿಕೃತ ನಿವಾಸದಲ್ಲಿ ಸಂಸದೆ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಎಫ್.ಐ.ಆರ್. ದಾಖಲಿಸಲಾಗಿದೆ.

# ಯೂರೋ ಸ್ಕೂಲ್‌ಗೆ ಶೇ. 100 ಫಲಿತಾಂಶ : ಅಧೀತ್ ಪ್ರಥಮ

ದಾವಣಗೆರೆ, ಮೇ 17 - 2023-24ನೇ ಸಾಲಿನ ಐಸಿಎಸ್‌ಇ ಹತ್ತನೇ ತರಗತಿಯಲ್ಲಿ ನಗರದ ನಗರದ ಯುರೋ ಸ್ಕೂಲ್ ಶೇ. 100 ರಷ್ಟು ಫಲಿತಾಂಶ ಪಡೆದಿದೆ. ಒಟ್ಟು 25 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 8 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆ, 15 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಶಾಲೆಯ ಅಧೀತ್ ಬಸವರಾಜ್ ಇಂಗ್ಲಿಷ್-2 ಮತ್ತು ಇತಿಹಾಸ ಪತ್ರಿಕೆಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿರುವುದಲ್ಲದೇ, 600ಕ್ಕೆ 587 ಅಂಕಗಳನ್ನು ಪಡೆಯುವುದರ ಮೂಲಕ ದಾವಣಗೆರೆ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ್ದಾನೆ. ದಾನೇಶ್ವರಿ ಪಿ. ಅಥಣಿ 575, ಮಾನ್ಯ ಪೂಜಾರ್ 571, ಇಶಾನ್ ಎಸ್. ರೇವಣ್‌ಕರ್ 555, ವಿ. ಪ್ರತೀಕ್ಷಾ 552, ಮನಸ್ವಿ ಎಮ್ 533, ನಷಿತಾ ಅತ್ಲೂರಿ 533, ಎಸ್. ಹೆಚ್. ಫಾರಿಯಾ ಶಿಫಾ 524 ಅಂಕಗಳನ್ನು ಪಡೆದಿದ್ದಾರೆ.


**ಕೆಲಸಕ್ಕೆ ಬೇಕಾಗಿದ್ದಾರೆ**
25 ರಿಂದ 35 ವರ್ಷದೊಳಗಿನ ಪುರುಷ ಅಭ್ಯರ್ಥಿ ಸಂಜೆ 6 ರಿಂದ ರಾತ್ರಿ 12ರವರೆಗೆ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
08192 254736

**ಸೈಟುಗಳು ಮಾರಾಟಕ್ಕಿವೆ**
KHB ಕಾಲೋನಿ (Judge quarters ಹತ್ತಿರ) ಉತ್ತರ 50x80, ಪಶ್ಚಿಮ 30x50, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50, ಉತ್ತರ 30x50, ವಿದ್ಯಾನಗರ Coffee Day ಸರ್ಕಲ್ ಹತ್ತಿರ ದಕ್ಷಿಣ 50x85
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ ಕೊನೆಯ ಬಸ್ ಸ್ಟಾಪ್ ಹತ್ತಿರ 2 ಬೆಡ್ ರೂಮ್, 3 ಬೆಡ್ ರೂಮ್, ಮೊದಲನೇ ಮಹಡಿಯಲ್ಲಿ ಹೈಟೆಕ್ ಹಾಸ್ಪಿಟಲ್ ಹತ್ತಿರ, ಹೈಟೆಕ್ ಲೇಔಟ್‌ನಲ್ಲಿ ಇಂಡಿಪೆಂಡೆಂಟ್ ಹೌಸ್ 3 ಬೆಡ್ ರೂಮ್ ಮನೆ ಲೀಸ್‌ಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches,
D.Pharma, B.Ed., PhD regular
B.A., B.com., B.Sc., M.A., M.Com.,
MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ನಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಬಾಡಿಗೆಗೆ**
ವಿಶಾಲವಾದ ಡ್ಯೂಪ್ಲೆಕ್ಸ್ 3 ಬೆಡ್ ರೂಂ, ಅಟ್ಯಾಚ್ಡ್ ಬಾತ್ ರೂಂ, ಕಾರ್ ಪಾರ್ಕಿಂಗ್ ಮತ್ತು ಬೋರ್‌ವೆಲ್ ವ್ಯವಸ್ಥೆ ಇರುವ ಮನೆ ಎಸ್.ಎಸ್. ಬಡಾವಣೆ ಬಿ ಬ್ಲಾಕ್, 4ನೇ ಮೇನ್, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
96633 93916

**ಹೋಟೆಲ್ ಮಾರಾಟಕ್ಕಿದೆ**
ಸುಸಜ್ಜಿತ ಹೋಟೆಲ್ ಮಾರಾಟಕ್ಕಿದೆ. ಸಂಪರ್ಕಿಸಿ:
ಮೊ. 99160-62963

**ಮನೆಗಳು ಮಾರಾಟಕ್ಕಿವೆ**
SS 'B' Block ದಕ್ಷಿಣ 30x40 ಡುಪ್ಲೆಕ್ಸ್ D.C ಮನೆ ಸರ್ಕಲ್ ಹತ್ತಿರ, ದಕ್ಷಿಣ 30x54 (Hifi) (ಡುಪ್ಲೆಕ್ಸ್) ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x35 (Ground Floor)
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ 5ನೇ ಬಸ್ ಸ್ಟಾಪ್ ಹತ್ತಿರ 40x60 ಉತ್ತರ, 40x60 ದಕ್ಷಿಣ, 30x40 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ (ಅಕ್ಕ-ಪಕ್ಕ) 40x60 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಪಾರ್ಟ್ ಟೈಂ ಅಥವಾ ಫುಲ್ ಟೈಂ ಕೆಲಸ ಮಾಡಲು ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಪಾಸ್ ಅಥವಾ ಫೇಲ್ ಆದ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಬೋನಸ್ ಇರುತ್ತದೆ.
98806 59221/ 93410 21860

**ಮಳಿಗೆ ಬಾಡಿಗೆಗಿದೆ**
ಕೆ.ಬಿ.ಬಡಾವಣೆ, ಲಾಯರ್ ರಸ್ತೆ, 1ನೇ ಮಹಡಿಯಲ್ಲಿ 40x44 ಅಡಿ, ಫರ್ನಿಚರ್ ಸಮೇತ ಎ.ಸಿ. ಸೌಲಭ್ಯವಿರುವ LIC ಆಫೀಸ್ ಮತ್ತು ಬ್ಯಾಂಕ್ ಗೆ ಅನುಕೂಲವಾದ ಮಳಿಗೆ ಬಾಡಿಗೆಗಿದೆ. ಮಧ್ಯವರ್ತಿಗಳೂ ಸಹ ಸಂಪರ್ಕಿಸಬಹುದು.
97384 62378, 88928 44854
96665 53640

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಹೌಸಿಂಗ್ ಬೋರ್ಡ್ ಪಕ್ಕ, ಅಮರಾವತಿ ಹೌಸಿಂಗ್ ಕಾಲೋನಿ ಪಕ್ಕದಲ್ಲಿ ಪೂರ್ವ & ಪಶ್ಚಿಮ 30x40 ಅಳತೆಯ 4 ಸೈಟುಗಳು ಮಾರಾಟಕ್ಕಿವೆ
98809 33630

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x55 ಅಕ್ಕ-ಪಕ್ಕ, 40x60 ಅಕ್ಕ-ಪಕ್ಕ, 40x80 ಪಶ್ಚಿಮ 30x40, 30x50, ಬನಶಂಕರಿ ಬಡಾವಣೆ ಪೂರ್ವ 30x57 (ಅಕ್ಕ-ಪಕ್ಕ) ಪಶ್ಚಿಮ 40x70 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ದಾವಣಗೆರೆಯ ಶರಭೇಶ್ವರ ಊಟದ ಹೋಟೆಲ್‌ನಲ್ಲಿ ಸರ್ವಿಸ್, ಸೇಲ್ಸ್ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ. (ಪಾರ್ಟ್ ಟೈಮ್) ಉಚಿತ ಊಟ, ವಸತಿ ಸೌಲಭ್ಯದೊಂದಿಗೆ, ಉತ್ತಮ ಸಂಬಳ ಲಭ್ಯವಿದೆ. ಸಂಪರ್ಕಿಸಿ:
94489 80070, 88847 04025

**ಸೈಟು, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ 'B' ಬ್ಲಾಕ್‌ನಲ್ಲಿ 30x50 ಪೂರ್ವ 30x40 ಪೂರ್ವ ಬೈಪಾಸ್ ಸರ್ವಿಸ್ ರಸ್ತೆಗೆ 30x55 ದಕ್ಷಿಣ (ಕಮರ್ಷಿಯಲ್) ವಿನಾಯಕ ಬಡಾವಣೆಯಲ್ಲಿ 30x50 ಪೂರ್ವ-ದಕ್ಷಿಣ ಕಾರ್ನರ್ ಸೈಟುಗಳು ಮಾರಾಟಕ್ಕಿವೆ ಇವೆ. ಹೊಸ ಕುಂದುವಾಡದಲ್ಲಿ ರೋಹನ್ ಗಾರ್ಡ್‌ನಲ್ಲಿ 3 ಸೈಟ್ ಉತ್ತರ 30x50 ಇವೆ. ಸಂಪರ್ಕಿಸಿ : ಸುರೇಶ್ P S ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮಳಿಗೆ ಮಾರಾಟಕ್ಕೆ ಇದೆ**
ಡೋ.ನಂ. 80/6, ರೇಣುಕ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಮಾರಾಟಕ್ಕೆ ಇದೆ.
93422 96777

**ಮನೆ ಬಾಡಿಗೆಗೆ ಇದೆ**
ಡಬ್ಬಲ್ ಬೆಡ್ ರೂಮ್, ಅಟ್ಯಾಚ್ ಬಾತ್ ರೂಮ್, ಮೊದಲನೆ ಮಹಡಿ, ಶೇಖರಪ್ಪ ಬಡಾವಣೆ, ಅಶ್ವಿನ್ ಕ್ಲಿನಿಕ್ ಹಿಂಭಾಗ, ಆವರಗೆರೆ, ದಾವಣಗೆರೆ.
98443 89966

**ಬೇಕಾಗಿದ್ದಾರೆ**
ಹಾಸ್ಪಿಟಲ್‌ನಲ್ಲಿ ಇನ್ಸೂರೆನ್ಸ್ ಸ್ಕೀಮ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸ್ಟಾಫ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು
99725 23910

**ಅತೀ ಕಡಿಮೆ ಖರ್ಚಿನಲ್ಲಿ MBBS**
18 ರಿಂದ 32 ಲಕ್ಷದೊಳಗೆ ವಿದೇಶಗಳಲ್ಲಿ MBBS ಮಾಡಬಹುದು.( NEET 130 SCORE ABOVE ) CONTACT:
98868 96574
86602 35013

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ 30x50, (2400 sqft) ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51 ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**WANTED**
Boys & Girls required for billing work at Food Mart Supermarket.
Quli : Any Degree
98864 63531

**WANTED**
Female Candidate having the B.com with tally Required to work inTata Pawer Solar office.
B.G. Basavarajappa
# 43H, SJJM Complex, Jayadeva Circle, Hadadi Road, Davangere.
99001 42052

**ವಧು ಬೇಕಾಗಿದೆ**
ವಿಧವೆಯರು, ವಿಚ್ಛೇದಿತರು, ಮಕ್ಕಳಿದ್ದರೂ ಸಹ, ಸಂಪರ್ಕಿಸಿ :
89519 33174

**ಬೇಕಾಗಿದ್ದಾರೆ**
ಸಿಲಿಂಡರ್ ಸಪ್ಲೈ ಮಾಡಲು ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. (ಇಂಡೇನ್, ಹೆಚ್.ಪಿ., ಭಾರತ್ ಏಜೆನ್ಸಿಯಲ್ಲಿ ಅನುಭವವಿರುವವರಿಗೆ ಆದ್ಯತೆ)
ಶಂಕರಲೀಲಾ ಗ್ಯಾಸ್ ಏಜೆನ್ಸಿ, ದಾವಣಗೆರೆ.
99164 54770, 90190 94446

**ಮಳೆಯಲ್ಲಿ ಮನೆ ಲೀಕೇಜ್**
ಮಳೆ ನೀರಿನಿಂದ ನಿಮ್ಮ ಮನೆಯ ಒಳಗಡೆ ನೀರಿನ ಲೀಕೇಜ್ ಆಗಿದ್ದರೆ ಶಾಶ್ವತವಾಗಿ ನಿಲ್ಲಿಸಿ ಕೊಡಲಾಗುವುದು ಮತ್ತು ಕೆಲಸ 100% ಕೆಲಸ ಗ್ಯಾರಂಟಿ ಇರುತ್ತದೆ. ಸಂಪರ್ಕಿಸಿ :
81050 40110, 72046 33302

**ಹುಡುಗರು ಬೇಕಾಗಿದ್ದಾರೆ**
ಫರ್ನಿಚರ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವ ಮತ್ತು ವಿದ್ಯಾರ್ಹತೆ ಅವಶ್ಯಕತೆ ಇರುವುದಿಲ್ಲ. ಸಂಪರ್ಕಿಸಿ :
ಕಬ್ಬೂರ್ ಫರ್ನಿಚರ್ಸ್
ಪಿ.ಬಿ. ರಸ್ತೆ, ದಾವಣಗೆರೆ, ಸುಲ್ತಾನ್ ಜ್ಯೂವೆಲರ್ಸ್ ಹತ್ತಿರ, ದಾವಣಗೆರೆ.

**ಮನೆ ಮತ್ತು ರೂಂ ಬಾಡಿಗೆಗಿದೆ**
ಜಯನಗರ, ಎ ಬ್ಲಾಕ್‌ನಲ್ಲಿ 15x40 ವಿಸ್ತೀರ್ಣದ ಸಿಂಗಲ್ ಹಾಗೂ ಡಬಲ್ ಬೆಡ್ ರೂಂ ಹಾಗೂ 15x15 ವಿಸ್ತೀರ್ಣದ ಫರ್ನಿಚರ್ ಸೌಲಭ್ಯದ ರೂಂ ಬಾಡಿಗೆಗೆ ದೊರೆಯುತ್ತದೆ.
94484 39639

**14 ಗುಂಟೆ ಕೃಷಿ ಜಮೀನು ಮಾರಾಟಕ್ಕಿದೆ**
ಭೂಸವ್ವನಹಟ್ಟಿ, ದಾವಣಗೆರೆ ತಾ|| (CC ರೋಡ್ ಪಕ್ಕವಿದೆ), (NJY & IP ವಿದ್ಯುತ್ ಲೈನ್ ಹತ್ತಿರದಲ್ಲಿವೆ) ಸಂಪರ್ಕಿಸಿ:-
88927 73882

**ಗ್ಯಾಸ್ ಗೀಸರ್**
Fully Automative
Rs. 3990/- R.O & ಗ್ಯಾಸ್ ಗೀಸರ್ ಸರ್ವೀಸ್‌ಗಾಗಿ ಸಂಪರ್ಕಿಸಿ : ಮರುತ್ ಎಂಟರ್ ಪ್ರೈಸಸ್, ವೈ. ಎಂ.ಸಿ. ಕಾಂಪ್ಲೆಕ್ಸ್, ಹದಡಿ ರೋಡ್, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**FLAT FOR LEASE**
2 BHK, North Facing
1325 sqft. address : AM Apartment, Nainika Prime Rose, Vidyanagar City Bus last stop. Davangere.
8951938228

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED LADY TEACHERS**
* B.sc./BEd., - PCM/ CBZ - 04 posts
* BA/BEd.,- 04 posts
* COMPUTER TEACHERS -02
Note: we preference will be given to right & experienced & attractive salary will be given to experienced candidates.
95356 10817

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸ್ಪೇಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹಾರ ಸಚೇತರಾಗುವುದು. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
81478 03755

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮಗುವಿನ ಆರೈಕೆ ಮಾಡಲು ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
96325 66170

**ಕೆಲಸಕ್ಕೆ ಬೇಕಾಗಿದ್ದಾರೆ**
ಪಾಟೀಲ್ ಏಜೆನ್ಸೀಸ್
ಆಪೆ ಆಟೋ ಡ್ರೈವರ್-1 (DL)
ಸೇಲ್ಸ್ ಮೆನ್ - 1
90606 60949
98803 28444

**ಮನೆ/ಆಫೀಸ್ ಬಾಡಿಗೆಗೆ/ಲೀಸ್‌ಗಿದೆ**
1200 ಚದರ.3bhk 1ನೇ ಮಹಡಿ.4ನೇ ಮುಖ್ಯ ರಸ್ತೆ (ಹಳೇ ಪೋಸ್ಟ್ ಆಫೀಸ್ ರಸ್ತೆ), ಅಂಬಾ ಭವಾನಿ ದೇವಸ್ಥಾನದ ಹತ್ತಿರ. ಕಾವೇರಮ್ಮ ಶಾಲೆ ಹಿಂಭಾಗ, ಕೆಬಿ ಬಡಾವಣೆ, ದಾವಣಗೆರೆ. (ಸಸ್ಯಾಹಾರಿಗಳಿಗೆ ಮಾತ್ರ)
8867476070, 9480176324

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ವಧು ಬೇಕಾಗಿದೆ**
44 ವರ್ಷ, ಫೈನಾನ್ಸ್ ಮತ್ತು ಕಿರಾಣಿ ಮರ್ಚೆಂಟ್ ಮಾಡುತ್ತಿರುವ ವರನಿಗೆ ವಧು ಬೇಕಾಗಿದೆ.
89047 54519
86184 74909

**ಮಳಿಗೆಗಳು ಬಾಡಿಗೆಗಿವೆ**
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಬೆಳ್ಳಿ, ಬಂಗಾರ, ಬಟ್ಟೆ ಅಂಗಡಿಗೆ ಸೂಕ್ತವಾದದ್ದು. ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ...
ಮಂಡಿಪೇಟೆ, ದಾವಣಗೆರೆ.
96865 51303
99806 29965

**WANTED IMMEDIATELY**
Experienced Head master / Accountant / Teachers for nursery, primary and high school all subjects @ M.E.S Convent
Walk in interview 18-5-2024.
10.30 am to 12 noon along with all testimonials and apply # 5699, Anjeneya badavane, 9th cross near Indragiri Chandragiri appartment, Davangere-577004
Contact
98804 36414, 98800 30171

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
888 424 0403

**ಶಿಕ್ಷಕಿಯರು ಬೇಕಾಗಿದ್ದಾರೆ**
B.A. B.Ed (Eng) - 2
B.Sc B.Ed - 2
ಮೌಂಟ್ ಎವರೆಸ್ಟ್ ವಿದ್ಯಾಲಯ
ನಿಟುವಳ್ಳಿ, ಜಯನಗರ, ದಾವಣಗೆರೆ
91136 10789, 97439 24203

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಗಳಿಗೆ SSLC, PUC, ಪಾಸ್/ಫೇಲ್ ಆದ ಹಾಗೂ ITI, Diploma, Any Degree, B.Sc Nursing, GNM Nursing, B.Com Tally ಪಾಸಾಗಿರುವ ಅಭ್ಯರ್ಥಿಗಳು, ಗಾರ್ಮೆಂಟ್ಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ : ಶ್ರೀ ಕಲ್ಪತರು ಏಜೆನ್ಸೀಸ್, ದಾವಣಗೆರೆ.
92411 22555

**ಬೇಕಾಗಿದ್ದಾರೆ**
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಕೇಶ್ವರ ಇಂಡಸ್ಟ್ರೀಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ. ಸಂಪರ್ಕಿಸಿ :
73488 57382, 94829 91495

**ಮನೆ ಬಾಡಿಗೆಗೆ ಇದೆ**
ನಿಟ್ಟುವಳ್ಳಿ ಮೌನೇಶ್ವರ ಬಡಾವಣೆ, 3ನೇ ಮೇನ್, 1ನೇ ಕ್ರಾಸ್‌ನಲ್ಲಿ, #545/63ರಲ್ಲಿ ಮೂಲ ಸೌಕರ್ಯಗಳನ್ನು ಹೊಂದಿದ್ದು, 2 ಮನೆಗಳು ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಬಾಡಿಗೆಗೆ ಇವೆ.
72593 24598

# ಸ್ವಾಯತ್ತ ಸಂಸ್ಥೆಯಾಗಿ ಬಿಐಇಟಿ

ದಾವಣಗೆರೆ, ಮೇ 17- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯವು 2024-25ನೇ ಸಾಲಿನಿಂದ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಯುಜಿಸಿ ಅನುಮೋದನೆ ನೀಡಿದೆ ಎಂದು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಐಇಟಿ ಕಳೆದ 26 ವರ್ಷಗಳಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಾಗಿ ಕಾರ್ಯ ನಿರ್ವಹಿಸುತ್ತಿತ್ತು. ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ನಿರ್ಧರಿಸಿ 2023ರ ಮಾ.3ರಂದು ವಿಟಿಯುಗೆ ಅರ್ಜಿ ಸಲ್ಲಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ವಿಟಿಯು ತಜ್ಞರ ತಂಡ ಕಳೆದ ಮೇ ತಿಂಗಳಿನಲ್ಲಿ ಕಾಲೇಜಿಗೆ ಭೇಟಿ ನೀಡಿ, ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ ವಿಟಿಯು ಅರ್ಜಿಯನ್ನು ಯುಜಿಸಿಗೆ ರವಾನಿಸಿತ್ತು. ಇದರ ಆಧಾರದಲ್ಲಿ 2024ರ ಜನವರಿ 20ರಂದು ಯುಜಿಸಿ ಸಂಸ್ಥೆ ನಮ್ಮ ಕಾಲೇಜಿಗೆ ಹತ್ತು ವರ್ಷಗಳ ಕಾಲ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಅನುಮೋದನೆ ನೀಡಿದೆ ಎಂದು ಮಾಹಿತಿ ನೀಡಿದರು.

ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮುಖ್ಯಸ್ಥೆ ಡಾ. ನಿರ್ಮಲ ಮಾತನಾಡಿ, ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಶೇ.60ರಷ್ಟು ವಿದ್ಯಾರ್ಥಿಗಳಿಗೆ ಉನ್ನತ ಸಂಸ್ಥೆಗಳಲ್ಲಿ ಉದ್ಯೋಗ ದೊರತಿದೆ.



ಇದೀಗ ನಮ್ಮ ಕಾಲೇಜಿಗೆ ಹೊಸ ಪಠ್ಯಕ್ರಮ ನವೀಕರಿಸಲು ಅಥವಾ ಇರುವ ಪಠ್ಯಕ್ರಮವನ್ನು ಉದ್ಯಮದ ಅವಶ್ಯಕತೆಗೆ ಅನುಗುಣವಾಗಿ ಬದಲಾಯಿಸುವ ಅವಕಾಶ ಸಿಕ್ಕಂತಾಗಿದೆ. ಜೊತೆಗೆ ಪರೀಕ್ಷಾ ಸುಧಾರಣೆ, ನವೀನ ಬೋಧನಾ ವಿಧಾನ, ಸಂಶೋಧನೆ, ಗುಣಮಟ್ಟ ವರ್ಧನೆಗೆ ಅನುಕೂಲವಾಗಲಿದೆ.

-ಡಾ. ಹೆಚ್.ಬಿ. ಅರವಿಂದ್, ಪ್ರಾಂಶುಪಾಲರು, ಬಿಐಇಟಿ

ಕಾಲೇಜಿನ ಎಲ್ಲಾ ಹತ್ತು ವಿಭಾಗಗಳ 450 ವಿದ್ಯಾರ್ಥಿಗಳ ಪೈಕಿ 355ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿದ್ದಾರೆ. ಬರುವ ಜುಲೈನಲ್ಲಿ ಮತ್ತೆ ಉದ್ಯೋಗ ಮೇಳ ನಡೆಸಲುದ್ದೇಶಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಪಿಆರ್‌ಓ ಪ್ರೊ. ಜಿ.ಪಿ. ದೇಸಾಯಿ, ಕಲ್ಲೇಶಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ



ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿಯ 25ನೇ ವರ್ಷದ ಬ್ರಹ್ಮರಥೋತ್ಸವವು ಇಂದು ಬೆಳಿಗ್ಗೆ 11.45ಕ್ಕೆ ನೆರವೇರಲಿದೆ.

ಮಧ್ಯಾಹ್ನ 12.30ಕ್ಕೆ ಸಕಲ ಭಕ್ತಾದಿಗಳಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಕೇವಾಲ್ ಕ್ರಿಶನ್ ಗರ್ಗ್ ಜಿಲ್ಲೆಗೆ ಭೇಟಿ

ದಾವಣಗೆರೆ, ಮೇ 17 - ಪ್ರಧಾನ ಮಂತ್ರಿ ಸಡಕ್ ಯೋಜನೆ ಹಂತ-3ರಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ಕಾಮಗಾರಿಗಳ ಪರಿವೀಕ್ಷಣೆಗಾಗಿ ಇದೇ ದಿನಾಂಕ 21 ರಿಂದ 24 ರವರೆಗೆ ಪಂಜಾಬ್ ಚಂಡೀಗಡದ ರಾಷ್ಟ್ರೀಯ ಗುಣ ನಿಯಂತ್ರಣ ಮಾನಿಟರ್ ಕೇಂದ್ರದ ಕೇವಾಲ್ ಕ್ರಿಶನ್ ಗರ್ಗ್ ಇವರು ಜಿಲ್ಲೆಗೆ ಆಗಮಿಸಿ ಪರೀವಿಕ್ಷಣೆ ನಡೆಸಲಿದ್ದಾರೆ. ಸಾರ್ವಜನಿಕರು ಇವರನ್ನು ಇದೇ ದಿನಾಂಕ 24 ರಂದು ಹೋಟೆಲ್ ಸಾಯಿ ಇಂಟರ್ ನ್ಯಾಷನಲ್‌ನಲ್ಲಿ ಸಂಪರ್ಕಿಸಬಹುದು.ಮೊ.ಸಂ:9872255100ನ್ನು ಕರೆ ಮಾಡಬಹುದೆಂದು ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

# ಶಾಸಕರ ಅನುದಾನ ಬಿಡುಗಡೆಗೆ ಸಲಹೆ

## ಜೂನ್ ತಿಂಗಳೊಳಗಾಗಿ ಟೆಂಡರ್ ಕರೆಯದಿದ್ದರೆ ಅಧಿಕಾರಿಗಳೇ ಹೊಣೆ: ಸಿಎಂ

ಬೆಂಗಳೂರು, ಮೇ 17 - ಶಾಸಕರ ಅನುದಾನ ಬಿಡುಗಡೆ ಮಾಡಿ, ಜೂನ್ ತಿಂಗಳ ಒಳಗೆ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲಾಖಾ ಕಾರ್ಯದರ್ಶಿಗಳಿಗೆ ಸಲಹೆ ಮಾಡಿದ್ದಾರೆ.

ಜೂನ್ ತಿಂಗಳೊಳಗಾಗಿ ಟೆಂಡರ್ ಕರೆಯದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಿ ಎಂದು ಹೇಳಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಲಾಖಾ ಪ್ರಧಾನಕಾರ್ಯದರ್ಶಿಗಳ ಜೊತೆ ಅನೌಪಚಾರಿಕವಾಗಿ ಬರ ಪರಿಸ್ಥಿತಿ ನಿರ್ವಹಣೆ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಸಲಹೆ ನೀಡಿದ್ದಾರೆ.

ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮುಖ್ಯ ಕಾರ್ಯದರ್ಶಿಗಳು ಕರೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಸಚಿವರುಗಳು ಭಾಗಿಯಾಗಿ, ಮುಂಗಾರು ವಿಳಂಬ ಹಿನ್ನೆಲೆಯಲ್ಲಿ ಕುಡಿಯುವ ನೀರು, ಮೇವಿನ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು.

ಅನುದಾನ ವೆಚ್ಚ ಮಾಡದೆ ಪಿ.ಡಿ. ಖಾತೆಯಲ್ಲಿ ಹಣ ಇಟ್ಟು ಖರ್ಚು ಮಾಡದೇ ಇರಬಾರದು. ವೆಚ್ಚವಾಗದೇ ಇರಲು ಸಕಾರಣಗಳಿದ್ದರೆ ಮಾತ್ರ ಒಪ್ಪಲಾಗುವುದು. ಆರ್ಥಿಕ ಪ್ರಗತಿಯೊಂದಿಗೆ ಗುಣಾತ್ಮಕ ಖರ್ಚು ಮಾಡಲು ಸಹ ಒತ್ತು ನೀಡಿ ಎಂದು ಹೇಳಿದ್ದಾರೆ. ಯೋಜನಾ ಇಲಾಖೆಯಲ್ಲಿ 44% ಮಾತ್ರ ವೆಚ್ಚವಾಗಿದ್ದು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ನಿಧಿಯ ವೆಚ್ಚದಲ್ಲಿ ಪ್ರಗತಿ ಕುಂಠಿತವಾಗಿದ್ದು, ಇವೆರಡರ ಕ್ರಿಯಾ ಯೋಜನೆಗಳನ್ನು ಜೂನ್ ತಿಂಗಳಿನಲ್ಲಿಯೇ ಅನುಮೋದನೆ ಪಡೆದುಕೊಂಡು ಅನುಷ್ಠಾನ ಮಾಡುವುದಾಗಿ ಅಧಿಕಾರಿಗಳು ಮುಖ್ಯಮಂತ್ರಿಗಳಿಗೆ ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಶಾಸಕರ ಅನುದಾನ ಬಹಳ ವರ್ಷಗಳ ಕಾಲ ವೆಚ್ಚವಾಗಿಲ್ಲದಿದ್ದರೆ ಅದನ್ನು ವಾಪಸ್ ಪಡೆಯಲಾಗುವುದು ಎಂದು ಮುಖ್ಯಮಂತ್ರಿಗಳು ಹಿಂದೆಯೇ ನೀಡಿದ್ದ ಸೂಚನೆಯಂತೆ ಕ್ರಮ ವಹಿಸುತ್ತಿದ್ದೇವೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲಿ ತೊಡಕುಂಟಾಗಿದೆ ಎಂದು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನುವ ಮಾಹಿತಿ ಹಂಚಿಕೊಂಡರು.



ವಿವಿಧ ಇಲಾಖೆಗಳ ಪ್ರಧಾನಕಾರ್ಯದರ್ಶಿಗಳ ಜೊತೆ ಅನೌಪಚಾರಿಕವಾಗಿ ಬರ ಪರಿಸ್ಥಿತಿ ನಿರ್ವಹಣೆ, ಅಭಿವೃದ್ಧಿ ಕಾರ್ಯಕ್ರಮಗಳ ಸಭೆ ನಡೆಸಿದ ಸಿದ್ದರಾಮಯ್ಯ

ಸಕಾರಣಗಳಿಲ್ಲದೇ, ಕಳೆದ ವರ್ಷಕ್ಕಿಂತ ಹೆಚ್ಚಿನ ಸಾಧನೆ ಮಾಡಿದ್ದೇವೆ ಎಂದರೆ ಒಪ್ಪಲಾಗದು. ಹಣ ಲಭ್ಯವಿದ್ದು ಖರ್ಚು ಮಾಡದೇ ಹೋದರೆ ಅದು ಅಧಿಕಾರಿಗಳ ತಪ್ಪಾಗುತ್ತದೆ ಎಂದು ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

561 ಹೊಸ ಘೋಷಣೆಗಳಿದ್ದು, 403 ಘೋಷಣೆಗಳಿಗೆ ಸರ್ಕಾರಿ ಆದೇಶ ಹೊರಡಿಸಬೇಕಿದೆ. ಬಾಕಿಯಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕು, 27 ಘೋಷಣೆಗಳು ಪಿಪಿಪಿ ಮಾದರಿಯಲ್ಲಿದ್ದು, ಪ್ರಸ್ತಾವನೆಗಳು ಬರಬೇಕಿವೆ. ಇವನ್ನು ಶೀಘ್ರ ತರಿಸಲು ಕ್ರಮ ವಹಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

ಅನುದಾನ ಬಳಕೆ ಪ್ರಮಾಣ ಪತ್ರ ಕೇಂದ್ರ ಸರ್ಕಾರಕ್ಕೆ ಸಕಾಲದಲ್ಲಿ ಕಳುಹಿಸದಿದ್ದರೆ ಮುಂದಿನ ಕಂತು ಬಿಡುಗಡೆಯಾಗುವುದಿಲ್ಲ. ಟೆಂಡರ್ ಕರೆಯಲು ಚುನಾವಣಾ ಆಯೋಗದಿಂದ ಅನುಮತಿ ಪಡೆದಿರುವುದರಿಂದ ಕೇಂದ್ರ ಪ್ರಾಯೋಜಿತ ಯೋಜನೆಗಳ ಟೆಂಡರ್ ಕರೆಯುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹೇಳಿದರು.

ಬರ ಸಂಬಂಧ 33.50 ಲಕ್ಷ ರೈತರಿಗೆ ಬೆಳೆ ಹಾನಿ ಪರಿಹಾರ ನೀಡಲಾಗಿದೆ. 20.13 ಲಕ್ಷ ರೈತ ಕುಟುಂಬಗಳಿಗೆ ತಲಾ 2,400 ರೂ. ನಂತೆ 476.40 ಕೋಟಿ ರೂ.ಗಳನ್ನು ಜೀವನೋಪಾಯ ನಷ್ಟಕ್ಕೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬೀಜ ಬಿತ್ತನೆ ಮಾಡಿ ಚಿಗುರದೇ ಒಣಗಿಹೋಗಿರುವ ಪ್ರಕರಣಗಳಲ್ಲಿ ಬೆಳೆ ಹಾನಿ ಪರಿಹಾರ ನೀಡುವ ಬಗ್ಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿ ಬದಲಾವಣೆ ಮಾಡುವ ಬಗ್ಗೆ ಸಚಿವ ಸಂಪುಟದ ಉಪಸಮಿತಿಯಲ್ಲಿ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಕೋರಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ರಾಜ್ಯದಲ್ಲಿ ಮುಂಗಾರು ಉತ್ತಮವಾಗುವ ಎಲ್ಲಾ ಸೂಚನೆ ಇದೆ. ಜೂನ್ ಮೊದಲ ವಾರದಲ್ಲಿ ಕರ್ನಾಟಕಕ್ಕೆ ಮುಂಗಾರು ಪ್ರವೇಶಿಸುವ ಸೂಚನೆ ಇದೆ ಎನ್ನುವ ಮಾಹಿತಿಯನ್ನು ಅಧಿಕಾರಿಗಳು ನೀಡಿದರು.

53,500 ಕ್ವಿಂಟಾಲ್ ಬಿತ್ತನೆ ಬೀಜ ಅಗತ್ಯವಿದೆ. ಎಲ್ಲಾ ಜಿಲ್ಲೆಗಳಲ್ಲೂ ಬೀಜ ದಾಸ್ತಾನಿದೆ. 26 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಅಗತ್ಯವಿದ್ದು, 15 ಲಕ್ಷ ಟನ್ ಲಭ್ಯವಿದೆ. ಬಿತ್ತನೆ ಬೀಜ, ಗೊಬ್ಬರಕ್ಕೆ ರಾಜ್ಯದಲ್ಲಿ ತೊಂದರೆ ಇಲ್ಲ ಎಂದರು.

ಕೆರೆಗಳ ಅಭಿವೃದ್ಧಿಯಡಿ ರಾಜ್ಯದ 33 ಸಾವಿರ ಕೆರೆಗಳ ಪೈಕಿ, 13 ಸಾವಿರ ಕೆರೆಗಳ ಪುನಶ್ಚೇತನಕ್ಕೆ ನರೇಗಾ ಯೋಜನೆಯಡಿ ಕ್ರಮ ವಹಿಸಲಾಗಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅಮೃತ ಕೆರೆ ಅಭಿವೃದ್ಧಿ ಯೋಜನೆಯಡಿ 824 ಕೆರೆಗಳ ಪುನಶ್ಚೇತನಕ್ಕೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಬರ ಪೀಡಿತ ಹಾಗೂ ಮಳೆ ಆಶ್ರಿತ ಪ್ರದೇಶಗಳಲ್ಲಿ 7,421 ಕೃಷಿ ಹೊಂಡಗಳನ್ನು ಪೂರ್ಣ ಮಾಡಲಾಗಿದೆ. 56,000 ಕೃಷಿ ಹೊಂಡಗಳನ್ನು ಈ ವರ್ಷ ನಿರ್ಮಾಣ ಮಾಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

## ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂಬಜಾರ್, ಬಿ.ಟಿ. ಲೇಔಟ್, ಎಲ್‌ಬಿಎಸ್ ನಗರ, ಆನೆಕೊಂಡ, ಇಮಾಂನಗರ, ಬಿಡಿಓ ಆಫೀಸ್, ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳಿಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಕೆಆರ್. ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್ ಜಗಳೂರು ರಸ್ತೆ, ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್.ಎಸ್. ಆಸ್ಪತ್ರೆ, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ವಿದ್ಯುತ್ ಗ್ರಾಹಕರ ಸಭೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ನಗರ ಉಪ ವಿಭಾಗ-1ರ ವತಿಯಿಂದ ಇಂದು ಮಧ್ಯಾಹ್ನ 3 ರಿಂದ 5.30 ರವರೆಗೆ ಗ್ರಾಹಕರ ಸಂವಾದ ನಡೆಯಲಿದ್ದು, ನಗರ ಉಪವಿಭಾಗ-1ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಸಭೆಯಲ್ಲಿ ಹಾಜರಾಗಬಹುದು.

# ಹೆಗಡೆ ನಗರದ ಜನರಿಗೆ ಮತ್ತೆ ಸಂಕಷ್ಟ...



**(1ನೇ ಪುಟದಿಂದ)** ಈಗ ಅವರು, ರಿಂಗ್ ರಸ್ತೆಗೆ ಸೇರಿದ ಜಾಗದಲ್ಲೇ ಶೆಡ್ ಕಟ್ಟಿಕೊಳ್ಳುವ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಮೂರ್ನಾಲ್ಕು ತಿಂಗಳಲ್ಲೇ ಶಾಶ್ವತ ಸೂರು ಕಲ್ಪಿಸುವುದಾಗಿ ನಮಗೆ ಹೇಳಿ ಊರ ಹೊರಗೆ ಕಳಿಸಿದ್ದರು. ಆದರೆ, ಏಳು ತಿಂಗಳಾದರೂ ಇನ್ನೂ ವಸತಿ ವ್ಯವಸ್ಥೆಯಾಗಿಲ್ಲ. ತಾತ್ಕಾಲಿಕ ಶೆಡ್‌ಗಳು ಮಳೆ - ಗಾಳಿಗೆ ಮುರಿದು ಬಿದ್ದಿವೆ. ಜೀವ ಕೈಯಲ್ಲಿ ಹಿಡಿದು ಬದುಕುವ ಪರಿಸ್ಥಿತಿ ಉಂಟಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜನರ ಜೀವನ ಬೀದಿಗೆ ಬಿದ್ದಿದೆ. ಆದರೂ, ಜನಪ್ರತಿನಿಧಿಗಳು ಹಾಗೂ ಅಲ್ಪಸಂಖ್ಯಾತ ಸಮಾಜದ ಮುಖಂಡರು ನಮ್ಮ ಕಡೆ ಗಮನ ಹರಿಸು ತ್ತಿಲ್ಲ ಎಂಬ ಆಕ್ರೋಶವೂ ಜನರಿಂದ ವ್ಯಕ್ತವಾಯಿತು.

ನಿನ್ನೆ ಉಂಟಾದ ಅವಘಡದಲ್ಲಿ ನಾಲ್ಕೈದು ಜನ ಗಾಯಗೊಂಡಿದ್ದಾರೆ. ಶಾಶ್ವತ ಮನೆಗಾಗಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನಾವು ಮೊದಲಿದ್ದ ಜಾಗದಲ್ಲೇ ಬಂದಿರುತ್ತೇವೆ ಎಂದು ಎಸ್.ಕೆ. ಸಲಾಂ ಹೇಳಿದ್ದಾರೆ.

ತಾತ್ಕಾಲಿಕ ಶೆಡ್‌ಗಳು ಕುಸಿದು ಜೀವಕ್ಕೆ ತೊಂದರೆಯಾಗುವ ಪರಿಸ್ಥಿತಿಯಾಗಿದೆ. ಮೊದಲು ಜಾಗ ಕೊಟ್ಟು ನಂತರ ನಮ್ಮನ್ನು ಸ್ಥಳಾಂತರಿಸಬೇಕಿತ್ತು ಎಂದು ಹಜರತ್ ಅಲಿ ಹೇಳಿದ್ದಾರೆ.

ನಿನ್ನೆ ಕರೆಂಟ್ ಹೋದ ಹತ್ತು ನಿಮಿಷಗಳಲ್ಲೇ ಬಿರು ಗಾಳಿ ಹಾಗೂ ಮಳೆಗೆ ಶೆಡ್‌ಗಳು ಕುಸಿದಿದ್ದವು. ತಗಡುಗಳು ಬಟ್ಟೆಗಳಂತೆ ಹಾರಿ ಹೋಗಿವೆ. ಈ ನಡುವೆ, ಕರೆಂಟ್ ಕಂಬವೂ ಬಿದ್ದಿತ್ತು. ಅದೃಷ್ಟವಶಾತ್ ಆ ವೇಳೆ ಕರೆಂಟ್ ಇರಲಿಲ್ಲ. ಒಂದು ವೇಳೆ ಕರೆಂಟ್ ಇದ್ದಿದ್ದರೆ ಜೀವಗಳೇ ಹೋಗುತ್ತಿದ್ದವು ಎಂದು ಆಶಿಯಾ ಹೇಳಿದ್ದಾರೆ.

ಊರ ಹೊರಗಿನ ಜಾಗದಲ್ಲಿ ಹಾವು - ಚೇಳುಗಳ ಕಾಟ ಅತಿಯಾಗಿದೆ. ಬಸ್ ಸಂಪರ್ಕ, ನೀರು, ರಸ್ತೆ, ಶಿಕ್ಷಣ ಎಲ್ಲದರ ಕೊರತೆ ಇದೆ. ಜೀವ ಕೈಯಲ್ಲಿ ಹಿಡಿದು ಬದುಕುವಂತಾಗಿದೆ ಎಂದವರು ಹೇಳಿದ್ದಾರೆ.

ಮನುಷ್ಯತ್ವದಿಂದ ಒಂದು ಗಂಜಿ ಕೇಂದ್ರವನ್ನೂ ತೆರೆದಿಲ್ಲ. ಮಾನವೀಯತೆಯನ್ನೇ ತೋರದಿದ್ದ ಮೇಲೆ, ಅಧಿಕಾರಿಗಳನ್ನು ನಂಬುವುದೇ ಕಷ್ಟವಾಗಿದೆ ಎಂದು ಅಲ್ತಾಫ್ ಬೇಸರ ವ್ಯಕ್ತಪಡಿಸಿದ್ದಾರೆ.

ಪಾಲಿಕೆ ಆಯುಕ್ತೆ ರೇಣುಕ ಅವರು ಸ್ಥಳಕ್ಕೆ ಭೇಟಿ ನೀಡಿ ಜನರ ಮನವೊಲಿಸುವ ಪ್ರಯತ್ನ ನಡೆಸಿದರು. ಪಾಲಿಕೆಯಿಂದ ನೆರವಿಗೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಆದರೆ, ಸಮಾಧಾನಗೊಳ್ಳದ ಜನರು, ಮಾಗಾನಹಳ್ಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಬಿರು ಮಳೆಯಲ್ಲೂ ಮಹಿಳೆಯರು ಪಟ್ಟು ಬಿಡದೇ ಪ್ರತಿಭಟನೆ ಮುಂದುವರೆಸಿದ್ದರು.

### ಮನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ ವಾಟರ್ ಪ್ರೂಫ್ ಶೆಡ್‌ಗೆ ತಕ್ಷಣವೇ ಕ್ರಮ : ರೇಣುಕಾ

ಹೆಗಡೆ ನಗರದ ಸ್ಥಳಾಂತರಗೊಂಡ ನಿವಾಸಿಗಳಿಗೆ ಶಾಶ್ವತ ಸೂರು ಕಲ್ಪಿಸಿಕೊಡಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಈಗಾಗಲೇ ಪ್ರಸ್ತಾವನೆ ಕಳಿಸಲಾಗಿದೆ. ಈಗ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣೆ ನಂತರ ಈ ಬಗ್ಗೆ ಕ್ರಮ ಸಾಧ್ಯವಾಗಲಿದೆ ಎಂದು ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

ಬಿರು ಮಳೆಯ ಕಾರಣದಿಂದಾಗಿ ತಾತ್ಕಾಲಿಕ ಮನೆಗಳ ಶೀಟ್‌ಗಳು ಬಿದ್ದಿವೆ. ಇವುಗಳ ದುರಸ್ತಿಗಾಗಿ 20 ಸಿಬ್ಬಂದಿಯನ್ನು ಈಗಾಗಲೇ ನೇಮಿಸಿದ್ದೇವೆ. ಬಿದ್ದಿರುವ ವಿದ್ಯುತ್ ಕಂಬಗಳ ದುರಸ್ತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದರು.

ವಾಟರ್ ಪ್ರೂಫ್ ಶೆಡ್ ಅಗತ್ಯವಿದೆ ಎಂದು ನಿವಾಸಿಗಳು ಕೇಳಿದ್ದಾರೆ. ಇಂದೇ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಿದ್ದೇನೆ ಎಂದು ರೇಣುಕಾ ಹೇಳಿದ್ದಾರೆ.

# ನಗರದ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ವಾಸವಿ ಜಯಂತಿ



ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಶ್ರೀ ದೇವಿಗೆ ಪಂಚರಂಗಿ ಅಲಂಕಾರ ಪೂಜೆ ನೆರವೇರಲಿದೆ.

ವಾಸವಿ ಭಜನಾ ಮಂಡಳಿ ಇವರಿಂದ ಇಂದು ಬೆಳಿಗ್ಗೆ 6ಕ್ಕೆ ವಾಸವಿ ಸುಪ್ರಭಾತ, 8ಕ್ಕೆ ಸೇವಾಕರ್ತರ ಸ್ವಹಸ್ತದಿಂದ ಕ್ಷೀರಾಭಿಷೇಕ. 11.30ರಿಂದ ಸೇವಾಕರ್ತ ದಂಪತಿಗಳಿಂದ ಅಮ್ಮನವರ ತೊಟ್ಟಿಲು ಸೇವಾ ಕಾರ್ಯಕ್ರಮ ನಡೆಯಲಿದೆ.

ಸಂಜೆ 6ರಿಂದ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ರಾಜಬೀದಿ ಉತ್ಸವ ನೆರವೇರಲಿದೆ ಎಂದು ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ತಿಳಿಸಿದ್ದಾರೆ.

# ಅಂಜಲಿ ಕೊಲೆ ಆರೋಪಿ ದಾವಣಗೆರೆಯಲ್ಲಿ ಸೆರೆ

**(1ನೇ ಪುಟದಿಂದ)** ಕೊಡಿಸಿದ್ದಾರೆ.

ಆರೋಪಿ ಚಾಕುವಿನಿಂದ ಗಾಯಗೊಂಡಿದ್ದ ಮಹಿಳೆಯೂ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾದಗ ಇಬ್ಬರು ಮುಖಾಮುಖಿಯಾಗಿ ತನಗೆ ಚಾಕು ಇರಿದಿದ್ದು ಈ ವ್ಯಕ್ತಿಯೇ ಎಂದು ಗಿರೀಶನನ್ನು ತೋರಿಸಿದ್ದಾಳೆ. ಆಗ ಆಸ್ಪತ್ರೆಯ ಉಪ ಠಾಣೆ ಪೊಲೀಸರು ಘಟನೆ ರೈಲಿನಲ್ಲಿ ನಡೆದ ಹಿನ್ನೆಲೆಯಲ್ಲಿ ರೈಲ್ವೆ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಆಗ ಆಸ್ಪತ್ರೆಗೆ ದಾವಣಗೆರೆ ರೈಲ್ವೆ ಠಾಣೆ ಪೊಲೀಸರು ಆಗಮಿಸಿ, ಇಬ್ಬರಿಂದ ಹೇಳಿಕೆ ಪಡೆದು ವಾಪಸ್ ಹೋಗಿದ್ದಾರೆ. ಗಿರೀಶನಿಗೆ ಚಿಗಟೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರು, ಚಾಕು ಇರಿತದಿಂದ ತೀವ್ರವಾಗಿ ಗಾಯಗೊಂಡಿದ್ದ ಲಕ್ಷ್ಮೀ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ಕಳುಹಿಸಿದ್ದರು. ಇಲ್ಲಿಯ ವರೆಗೂ ಚಿಕಿತ್ಸೆ ಪಡೆಯುತ್ತಿರುವ ಗಿರೀಶ್ ಅಂಜಲಿಯನ್ನ ಕೊಂದಿರುವ ಆರೋಪಿ ಎಂಬುದು ಯಾರಿಗೂ ತಿಳಿದಿರಲಿಲ್ಲ.

ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯ ಸಿಪಿಐ ಸಂತೋಷ್ ಪಾಟೀಲ್ ಅವರೊಂದಿಗೆ, ಆಸ್ಪತ್ರೆಗೆ ಭೇಟಿ ನೀಡಿ ಹೇಳಿಕೆ ಪಡೆದಿದ್ದ ಎಎಸ್‌ಐ ನಾಗರಾಜ್ ಮೊಬೈಲ್ ನೋಡುತ್ತಿದ್ದಾಗ, ಅಂಜಲಿ ಹತ್ಯೆ ಆರೋಪಿಯ ಫೋಟೋ ಸ್ಕ್ರೀನ್ ಮೇಲೆ ಬಂದಿದೆ. ಆಗ ತಾವು ಈಗ ಹೇಳಿಕೆ ಪಡೆದಿರುವ ವ್ಯಕ್ತಿಯೇ ಅಂಜಲಿ ಕೊಲೆ ಆರೋಪಿ ಎಂದು ತಿಳಿದು, ಮತ್ತೆ ಆಸ್ಪತ್ರೆಗೆ ಹೋಗಿ ಆತನ ಪೂರ್ವಪರ ವಿಚಾರಿಸಿ, ಆತನ ಫೋಟೋಗಳನ್ನು ಹುಬ್ಬಳ್ಳಿ ಪೊಲೀಸರಿಗೆ ಕಳುಹಿಸಿದ ಆಧಾರದ ಮೇಲೆ ಹುಬ್ಬಳ್ಳಿಯ ಎಸಿಪಿ ಬಸವರಾಜ್ ನೇತೃತ್ವದಲ್ಲಿ ಪೊಲೀಸರು ದಾವಣಗೆರೆಗೆ ಆಗಮಿಸಿ, ಆರೋಪಿಯನ್ನು ಬಂಧಿಸಿ ಹುಬ್ಬಳಿಗೆ ಕರೆದೊಯ್ದಿದ್ದಾರೆ.

ಅಂಜಲಿ ಹತ್ಯೆ ಆರೋಪಿ ವಿಶ್ವನಾಥ ಅಲಿಯಾಸ್ ಗಿರೀಶ್ ಸಾವಂತ್ ವಿರುದ್ಧ ದಾವಣಗೆರೆಯ ರೈಲ್ವೆ ಪೊಲೀಸ್ ಠಾಣೆಯಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗದಗ ಜಿಲ್ಲೆಯ ಮುಳಗುಂದ ನಿವಾಸಿ ಲಕ್ಷ್ಮೀ ಅವರ ಹತ್ಯೆಗೆ ಯತ್ನಿಸಿದ ಹಾಗೂ ಅವರನ್ನು ಕಾಮುಕ ದೃಷ್ಟಿಯಿಂದ ನೋಡಿದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.



**ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ:** ದಾವಣಗೆರೆಯಲ್ಲಿ ಪೊಲೀಸ್ ವಶಕ್ಕೆ ಪಡೆಯಲಾಗಿದ್ದ ಅಂಜಲಿ ಕೊಲೆ ಆರೋಪಿ ಗಿರೀಶ ಸಾವಂತಗೆ ನಗರದ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಗಿರೀಶನ ತಲೆ ಹಾಗೂ ಮುಖದ ಭಾಗಕ್ಕೆ ತೀವ್ರ ಗಾಯವಾಗಿದ್ದರಿಂದ, ಆಸ್ಪತ್ರೆಯಲ್ಲಿನ ಕೈದಿ ಕೊಠಡಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕೊಠಡಿ ಸುತ್ತ ಪೊಲೀಸ್ ಭದ್ರತೆ ಹಾಕಲಾಗಿದೆ.

ಆರೋಪಿ ರೈಲಿನಿಂದ ಬಿದ್ದ ಕಾರಣ, ತಲೆ ಮತ್ತು ಮುಖದ ಮೇಲೆ ಗಂಭೀರ ಗಾಯಗಳಾಗಿವೆ. ಸರಿಯಾಗಿ ಮಾತನಾಡುವ ಸ್ಥಿತಿಯಲ್ಲಿಲ್ಲ. ವೈದ್ಯರು ಅವನ ಆರೋಗ್ಯ ಸುಧಾರಣೆ ಆಗಿರುವ ವರದಿ ನೀಡಿದ ನಂತರ, ಕೋರ್ಟ್‌ಗೆ ಒಪ್ಪಿಸುತ್ತೇವೆ. ನಂತರ ಪೊಲೀಸ್ ಕಸ್ಟಡಿಗೆ ಪಡೆದು ತನಿಖೆ ಮುಂದುವರೆಸಲಾಗುವುದು ಎಂದು ಹುಬ್ಬಳ್ಳಿಯಲ್ಲಿ ಪೊಲೀಸ್ ಕಮೀಷನರ್ ರೇಣುಕಾ ಸುಕುಮಾರ್ ಹೇಳಿದ್ದಾರೆ.

ಆರೋಪಿ ಕೃತ್ಯ ಎಸಗಿದ ನಂತರ ಮೈಸೂರಿಗೆ ಹೋಗಿದ್ದ. ಮಹಾರಾಷ್ಟ್ರ ಅಥವಾ ಗೋವಾದಲ್ಲಿ ತಲೆಮರೆಸಿಕೊಳ್ಳಬೇಕು ಎಂದುಕೊಂಡು ಯೋಜನೆ ರೂಪಿಸಿರುವುದು ತಿಳಿದು ಬಂದಿದೆ. ದಾವಣಗೆರೆ ಸಮೀಪ ರೈಲಿನಿಂದ ಬಿದ್ದು ಗಾಯಗೊಂಡಿದ್ದ. ರೈಲ್ವೆ ಪೊಲೀಸರ ಮಾಹಿತಿ ಪ್ರಕಾರ, ಸ್ಥಳೀಯ ಪೊಲೀಸರು ಅವನನ್ನು ವಶಕ್ಕೆ ಪಡೆದು ಹುಬ್ಬಳ್ಳಿಗೆ ಕರೆತಂದಿದ್ದಾರೆ ಎಂದರು.

ಆರೋಪಿಯು ಅಂಜಲಿಯನ್ನು ಪ್ರೀತಿಸುತ್ತಿದ್ದು, ಅವಳು ಅವನ ನಂಬರ್ ಬ್ಲಾಕ್ ಮಾಡಿದ್ದಳು ಎನ್ನುವ ಮಾಹಿತಿಯಿದೆ. ಆ ಕುರಿತು ಇಬ್ಬರ ಮೊಬೈಲ್ ನಂಬರ್‌ಗಳನ್ನು ಸಿಡಿಆರ್‌ನಲ್ಲಿ ಸಂಗ್ರಹಿಸಿ, ವೈಜ್ಞಾನಿಕ ತನಿಖೆ ನಡೆಸಲಾಗುವುದು ಎಂದು ಹೇಳಿದರು.

## ಓದುಗರ ಪತ್ರ

### ರಸ್ತೆಯಲ್ಲಿರುವ ಹೊಂಡವನ್ನು ಮುಚ್ಚಿಸಿ



ಮಾನ್ಯರೇ,

ನಗರದ ಪ್ರತಿಷ್ಠಿತ ರಸ್ತೆಗಳಲ್ಲಿ ಒಂದಾದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ಹೊಂಡ ಬಿದ್ದಿದ್ದು, ವಾಹನಗಳು ವೇಗವಾಗಿ ಬಂದಾಗ ಈ ಸಣ್ಣ ಹಳ್ಳವುಗಮನಕ್ಕೆಬಾರದೇ ಅವಘಡ ಆಗಲು ಸ್ವಾಗತ ಮಾಡುವಂತಿದೆ. ದ್ವಿಚಕ್ರ ವಾಹನ ಸವಾರರುಗಳಿಗೆ ಈ ಸಮಸ್ಯೆಯು ಸವಾಲಾಗಿ ಎದುರಾಗುತ್ತದೆ.

ನಿತ್ಯ ಈ ರಸ್ತೆಯು ತುಂಬಾ ವಾಹನ ದಟ್ಟಣೆ ಮತ್ತು ಜನಸಂದಣಿಯನ್ನು ಹೆಚ್ಚಾಗಿ ಹೊಂದಿರುತ್ತದೆ. ಹೀಗೆ ಇದ್ದಾಗ್ಯೂ ಈ ಸಮಸ್ಯೆಯು ಮಹಾನಗರ ಪಾಲಿಕೆಯ ಕಣ್ಣಿಗೆ ಬೀಳದೇ ಇರುವುದು ಬೇಸರದ ಸಂಗತಿ. ಅನಾಹುತ ನಡೆಯುವ ಮುನ್ನವೇ ಈ ಸಮಸ್ಯೆಯನ್ನು ಆದಷ್ಟು ಶೀಘ್ರವಾಗಿ ಸರಿಪಡಿಸಿ, ಸಾರ್ವಜನಿಕರಿಗೆ ಉತ್ತಮ ವ್ಯವಸ್ಥೆ ಮಾಡಿಕೊಡಬೇಕಾಗಿ ನಗರದ ಸಾರ್ವಜನಿಕರ ಪರವಾಗಿ ವಿನಂತಿ ಆಗಿರುತ್ತದೆ.

- ವಾದಿರಾಜ ಭಟ್ ವೈ., ವಕೀಲರು, ದಾವಣಗೆರೆ.

## ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಮೇ 17 - ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಶೇ. 60 ಹಾಗೂ ಅದಕ್ಕೂ ಮೇಲ್ಪಟ್ಟು ಅಂಕ ಗಳಿಸಿ ಉತ್ತೀರ್ಣರಾದವರು ಇದೇ ದಿನಾಂಕ 30ರೊಳಗಾಗಿ ಸೊಸೈಟಿಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಸಂಘದ ಅಧ್ಯಕ್ಷ ಎನ್. ರಂಗಸ್ವಾಮಿ ಕೋರಿದ್ದಾರೆ. ಮಾಹಿತಿಗೆ 08192 271329ಗೆ ಸಂಪರ್ಕಿಸಬಹುದಾಗಿದೆ.

## ಬೆಳೆಗಳಿಗೆ ಅತಿ ಕ್ರಿಮಿನಾಶಕ ಬಳಕೆ

**(1ನೇ ಪುಟದಿಂದ)** ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಮತ್ತು ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ವಿಚಾರಣೆ ನಡೆಸುತ್ತಿದೆ. ಕೇಂದ್ರ ಸರ್ಕಾರ, ಕೃಷಿ ಸಚಿವಾಲಯ, ಎಫ್.ಎಸ್.ಎಸ್.ಎ.ಐ. ಸೇರಿದಂತೆ ಹಲವರಿಗೆ ನೋಟಿಸ್ ಕಳಿಸಲಾಗಿದೆ.

ಕ್ರಿಮಿನಾಶಕಗಳ ಬಳಕೆಯಿಂದಾಗಿ ಸಾವಿನ ಸಂಖ್ಯೆ ದೇಶಾದ್ಯಂತ ಹೆಚ್ಚಾಗಿದೆ ಎಂದು ಹಿರಿಯ ವಕೀಲರಾದ ಅನಿತಾ ಶೆಣೈ ಅವರು ಅರ್ಜಿ ದಾಖಲಿಸಿದ್ದಾರೆ.

ಅತಿಯಾದ ಕ್ರಿಮಿನಾಶಕ ಮತ್ತಿತರೆ ರಾಸಾಯನಿಕಗಳ ಬಳಕೆಯೇ ಕ್ಯಾನ್ಸರ್ ಹಾಗೂ ಇತರೆ ತೀವ್ರ ಸ್ವರೂಪದ ಕಾಯಿಲೆಗಳಿಗೆ ಪ್ರಮುಖ ಕಾರಣ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ಕೀಮ್ಸ್‌ನಲ್ಲಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ನಗರದ ಚಿಣ್ಣರು



ದಾವಣಗೆರೆ, ಮೇ 17- ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಿಮ್ಸ್ ಶಿವ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಈಚೆಗೆ ಹುಬ್ಬಳ್ಳಿಯ ಗೋಲ್ಡನ್ ಜ್ಯುಬಿಲಿ ಹಾಲ್‌ನಲ್ಲಿ ಸಾಂಸ್ಕೃತಿಕ ನಾಯಕ ಹಾಗೂ ವಿಶ್ವಗುರು ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿರುವ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಸ್ಕೂಲ್‌ನ ಎಲ್‌ಕೆಜಿಯ ಚಿನ್ಮಯಿ ಆರಾಧ್ಯ ಅಕ್ಕಮಹಾದೇವಿಯವರ ಪಾತ್ರದಲ್ಲಿ ಹಾಗೂ ಶ್ರೀ ಬಸವಣ್ಣನವರ ಪಾತ್ರದಲ್ಲಿ ಚಿರಂತ್ ಆರೂಢ ಭಾಗವಹಿಸಿ ಅಕ್ಕಮಹಾದೇವಿ ಹಾಗೂ ಬಸವಣ್ಣನವರ ವಚನಗಳನ್ನು ಹಾಡಿದರು.

## ವಾಯುವ್ಯದಲ್ಲಿ ತೀವ್ರ ತಾಪಮಾನ

**(1ನೇ ಪುಟದಿಂದ)** ಹೆಚ್ಚಾಗಿದೆ. ಮುಂದಿನ ಐದು ದಿನಗಳ ಕಾಲ ತೀವ್ರ ಬಿಸಿಗಾಳಿಯ ವಾತಾವರಣ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಶನಿವಾರದಿಂದ ದೇಶದ ಪೂರ್ವ ಹಾಗೂ ಮಧ್ಯ ಭಾಗದಲ್ಲಿ ಬಿಸಿಗಾಳಿಯ ಹೊಸ ಅಲೆ ಆರಂಭವಾಗಲಿದೆ ಎಂದೂ ಇಲಾಖೆ ಹೇಳಿದೆ.

## ದೈವಜ್ಞ ಸಮಾಜದ ಮಕ್ಕಳಿಗೆ ಪುರಸ್ಕಾರ

ದಾವಣಗೆರೆ, ಮೇ 17 - ಪ್ರೇಮಾ ಅರುಣಾಚಲ ಎನ್. ರೇವಣಕರ್ ಪ್ರತಿಷ್ಠಾನದ ವತಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ.85ರಷ್ಟು ಫಲಿತಾಂಶ ಪಡೆದ ದೈವಜ್ಞ ಸಮಾಜದ ಮಕ್ಕಳಿಗೆ 'ಶಾರದಾ ಪುರಸ್ಕಾರ' ರಾಜ್ಯ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಂಸ್ಥಾಪಕ ಡಾ. ನಲ್ಲೂರು ಅರುಣಾಚಲ ಎನ್. ರೇವಣಕರ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9341969084, 8147263552.

**ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ**

"ರಶ್ಮಿ" ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆ

ಕನ್ನಡ ಮಾಧ್ಯಮ ಶಾಲೆಯಲ್ಲಿ ಬೋಧನೆ ಮಾಡಲು

BA., B.Ed., Bsc., B.Ed.,

ವಿದ್ಯಾರ್ಹತೆಯುಳ್ಳ ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ.

ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.

ಸಂಪರ್ಕಿಸಿ : ಮೊ. : 99163 62288

## ಕೇಟರಿಂಗ್‌ಗೆ ಬೇಕಾಗಿದ್ದಾರೆ


ನಮ್ಮ ಷೋರೂಂನ ಸಿಬ್ಬಂದಿಗಳಿಗೆ ಮಧ್ಯಾಹ್ನದ ಸಸ್ಯಾಹಾರಿ ಊಟಾಕ್ಕಾಗಿ ಕೇಟರಿಂಗ್ ಮಾಡಲು ಬೇಕಾಗಿದ್ದಾರೆ. ಅಡುಗೆಯನ್ನು ತಯಾರು ಮಾಡಿ ನಮ್ಮ ಷೋರೂಂನಲ್ಲಿ ಕೇಟ-ರಿಂಗ್ ಮಾಡಬೇಕು.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ** ದಿ ವೆಡ್ಡಿಂಗ್ ಮಾಲ್....

ಚಾಮರಾಜ ಪೇಟೆ, ದಾವಣಗೆರೆ
9686195334
9680195329

## Ground & First Floor For Rent



AVAILABLE FOR RENT
SUITABLE FOR OFFICE/CLINIC/ BANK SIZE 45X55 FT.
(Once the Agreement is finalized, Building face lift will be done in this Pattern)

- Ground floor 3 Rooms+1 Big Hall with 4 Air Conditioners.
- 1 Big Hall with without Air Conditioner.
- 1 Italian Kitchen and outside one Bathroom.
- First Floor 2 Halls, 4 Rooms, Separate Entrance from West Side Staircase.
- Only Corporation Water Supply with Overhead Tank.
- Single Car Parking with Collapsible Gate.

7th Cross, 9th Main, P.J.Extension, Near Mruthunjaya Hospital, Davanagere.
**Contact: 98804 66799, 99860 35969.**

ಜಿ.ಎಂ ಎಜುಕೇಶನ್ ಟ್ರಸ್ಟ್ (ರಿ)

## ಸನ್‌ರೈಸ್ ಪ್ರಿ-ಸ್ಕೂಲ್



ಪ್ಲೇಗ್ರೂಪ್ | ನರ್ಸರಿ | ಎಲ್.ಕೆ.ಜಿ. | ಯು.ಕೆ.ಜಿ

## SUNRISE PRE-SCHOOL

Playgroup || Nursery | L.K.G. || U.K.G

ADMISSION OPEN

* ಸುಸಜ್ಜಿತ ಕೊಠಡಿಗಳು * ಕ್ರೀಡಾ ಸಾಮಗ್ರಿಗಳು
* ಕಲಿಕಾ ಆಟದ ಸಾಮಗ್ರಿಗಳು, * ನುರಿತ ಹಾಗೂ ಅನುಭವಿ ಶಿಕ್ಷಕರಿಂದ ಬೋಧನೆ



## ಪ್ರವೇಶ ಪ್ರಾರಂಭವಾಗಿದೆ

#430, ನಿಜಲಿಂಗಪ್ಪ ಬಡಾವಣೆ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು
ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ-577004

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : **9448053519, 08192 - 220008**

Srishyla Education Trust ®

## G.M. INSTITUTE OF TECHNOLOGY

GMIT Campus, P.B.Road, Davanagere.

## ಬೇಕಾಗಿದ್ದಾರೆ

ಈ ಕೆಳಕಂಡ ಹುದ್ದೆಗಳಿಗೆ ನುರಿತ, ಸೂಕ್ತ ತರಬೇತಿ ಹೊಂದಿದ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.

| | |
|---|---|
| Civil Engineer | B.E/ Dip in Civil Min 5+ years of experience |
| Maintenance Supervisor | B.E/ Dip in Electrical Min 5+ years of experience |
| Horticulturist/ Lawn Maintenance | Dip / B.Sc in Horticulture Min 5+ years of experience |
| Hostel Manager | Any Degree Min 3 year Experience in Hostel Management |
| Transport Manager | Any Degree Min 3 year Experience in Transport /Logistic Department |
| Front Office Executive | Any Degree with Excellent in Communication Skill |
| ಎಲೆಕ್ಟ್ರಿಷಿಯನ್ | ಕನಿಷ್ಠ 2-3 ವರ್ಷಗಳ ಅನುಭವ ಇರುವ ಡಿಪ್ಲೋಮೊ ಅಥವಾ ಐಟಿಐ ಎಲೆಕ್ಟ್ರೀಕಲ್ ಸೈನ್ಸ್ ಅಭ್ಯರ್ಥಿಗಳು ಬೇಕಾಗಿದ್ದಾರೆ |
| ಪ್ಲಂಬರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಪ್ಲಂಬರ್‌ಗಳು ಬೇಕಾಗಿದ್ದಾರೆ |
| ಕಾರ್‌ಪೆಂಟರ್ | ಕನಿಷ್ಠ 3 ವರ್ಷಗಳ ಅನುಭವ ಇರುವ ಕಾರ್‌ಪೆಂಟರ್ ಬೇಕಾಗಿದ್ದಾರೆ |
| ಡ್ರೈವರ್‌ಗಳು Car Drivers | ಕನಿಷ್ಠ 5 ವರ್ಷಗಳ ಅನುಭವ ಇರುವ (LMV ) ಲೈಸೆನ್ಸ್ ಹೊಂದಿರುವವರು ಬೇಕಾಗಿದ್ದಾರೆ |

Note: Age Limit not more than 40 Years
Send your Resume to career@gmit.ac.in
**M: 70196 95132, 90199 64655**



## ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,

#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ

### ಸರ್ವರಿಗೂ ವಾಸವಿ ಜಯಂತಿ ಹಬ್ಬದ ಶುಭಾಶಯಗಳು



ಆರ್.ಜಿ. ಶ್ರೀನಿವಾಸ್
ಅಧ್ಯಕ್ಷರು


ವಾಸವಿ ಜಯಂತಿ ಅಂಗವಾಗಿ ಆಚರಿಸುತ್ತಿರುವ ವಿಶೇಷ ಠೇವಣಿ ಮಾಸಾಚರಣೆಯಲ್ಲಿ ನೂತನ ಠೇವಣಿಗಳಾದ ವಾಸವಿ-555 ಮತ್ತು ವಾಸವಿ-450 ಠೇವಣಿಗಳಿಗೆ ಆಕರ್ಷಕ ಬಡ್ಡಿ ದರದಲ್ಲಿ ನಿಬಂಧನೆಗಳಿಗೆ ಒಳಪಟ್ಟು ವಿಶೇಷ ಠೇವಣಿಯನ್ನು ಸ್ವೀಕರಿಸುತ್ತಿದ್ದೇವೆ. ಮಾನ್ಯ ಸಾರ್ವಜನಿಕರು, ಠೇವಣಿದಾರರು, ಸದಸ್ಯ ಬಾಂಧವರು ಠೇವಣಿ ಮಾಡುವ ಮೂಲಕ ವಿಶೇಷ ಬಡ್ಡಿ ದರದ ಅನುಕೂಲತೆಯನ್ನು ಪಡೆಯಲು ವಿನಂತಿಸಿಕೊಳ್ಳುತ್ತೇವೆ. ವಾಸವಿ ಜಯಂತಿಯ ಶುಭ ಸಂದರ್ಭದಲ್ಲಿ ಮಾನ್ಯ ಷೇರು ಬಾಂಧವರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ ಹಾಗೂ ದಾವಣಗೆರೆ ಜಿಲ್ಲೆಯ ಸಮಸ್ತ ಬಾಂಧವರಿಗೆ ಮಾತೆ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರು ಸಮಸ್ತ ಜೀವಕೋಟಿಗೆ ಸನ್ಮಂಗಳವನ್ನು ಉಂಟು ಮಾಡಲಿ ಹಾಗೂ ಸಮಸ್ತ ಸಸ್ಯ ಕೋಟಿಯು ನಳನಳಿಸುವಂತೆ ಅನುಗ್ರಹಿಸಲೆಂದು ಆಶಿಸುತ್ತಾ ವಾಸವಿ ಜಯಂತಿಯ ಶುಭಾಶಯಗಳನ್ನು ಸರ್ವರಿಗೂ ಕೋರುತ್ತೇವೆ.

ವಾಸವಿ 555 ಠೇವಣಿಗೆ **ಶೇ.9.00*** ನಿಬಂಧನೆಗೆ ಒಳಪಟ್ಟು

ವಾಸವಿ 450 ಠೇವಣಿಗೆ **ಶೇ.8.75*** ನಿಬಂಧನೆಗೆ ಒಳಪಟ್ಟು

**ಶುಭಾಶಯ ಕೋರುವವರು ಆಡಳಿತ ಮಂಡಳಿ ನಿರ್ದೇಶಕರು**





ಕೆ.ವಿ. ಮಂಜುನಾಥ
ಉಪಾಧ್ಯಕ್ಷರು

### : ಸದಸ್ಯರ ಗಮನಕ್ಕೆ :

- ಬ್ಯಾಂಕಿನ ಉಪವಿಧಿಗಳ ಅನ್ವಯ ಪ್ರತಿ ಸದಸ್ಯನು ಕನಿಷ್ಠ ಒಂದು ಷೇರಿನ ಮೊತ್ತ ರೂ.1,000/-ಗಳನ್ನು ಹೊಂದಲೇಬೇಕಾದ ನಿಯಮವಿರುತ್ತದೆ. ಪ್ರಯುಕ್ತ ರೂ.1,000/-ಕ್ಕಿಂತ ಕಡಿಮೆ ಮೊತ್ತದ ಷೇರು ಹಣವನ್ನು ಹೊಂದಿರುವ ಸದಸ್ಯರು ವ್ಯತ್ಯಾಸದ ಮೊತ್ತವನ್ನು ಭರ್ತಿ ಮಾಡಿಕೊಳ್ಳುವ ಮೂಲಕ ಅರ್ಹ ಸದಸ್ಯರಾಗಿ ಮುಂದುವರೆಯಲು ಈ ಮೂಲಕ ಕೋರಲಾಗಿದೆ.
- ಸಹಕಾರ ಸಂಘಗಳ ಕಾಯ್ದೆ ಕಲಂ 20 (2) (ಎ iv) ಮತ್ತು (ಎ v) ರಲ್ಲಿ ತಿಳಿಸಿದಂತೆ ಕಳೆದ ಐದು ಸರ್ವಸದಸ್ಯರ ಸಭೆಗಳಲ್ಲಿ ಕನಿಷ್ಠ 2 ಮಹಾಸಭೆಗಳಿಗೆ ಹಾಜರಾಗದೇ ಇದ್ದಲ್ಲಿ ಮತ್ತು ಕಳೆದ ಐದು ಸಹಕಾರ ವರ್ಷಗಳಲ್ಲಿ ಸದಸ್ಯನು ಕನಿಷ್ಠ 2 ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿ ಸಂಖ್ಯೆ 20 (1) ರ ಅಡಿಯಲ್ಲಿ ಬರುವ ಉಪನಿಯಮಗಳು (i) (ii) ಮತ್ತು (iii) ಅನ್ವಯ ಕನಿಷ್ಠ ಸೇವೆಗಳನ್ನು ಬಳಕೆ ಮಾಡಿಕೊಳ್ಳದೇ ಇರುವ ಸದಸ್ಯರು ಅನರ್ಹ ಸದಸ್ಯರಾಗುತ್ತಾರೆ.
- ಪ್ರಯುಕ್ತ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಗೆ ಹಾಜರಾಗುವ ಮತ್ತು ಬ್ಯಾಂಕಿನ ಕನಿಷ್ಠ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಅರ್ಹ ಮತದಾರರಾಗಬೇಕಾಗಿ ಕೋರಿದೆ.
- ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಚುನಾವಣಾ ದಿನಾಂಕವನ್ನು ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರು ನಿಷ್ಕರಿಸಬೇಕಾಗಿರುತ್ತದೆ. ಆದರೆ ಜಾರಿಯಲ್ಲಿರುವ ಆಡಳಿತ ಮಂಡಳಿಗೆ ಚುನಾವಣೆ ಪ್ರಕ್ರಿಯೆ ನಡೆದು ಚುನಾವಣಾ ಕಣದಲ್ಲಿ ಪ್ರತಿಸ್ಪರ್ಧಿ ಇಲ್ಲದೇ ಇರುವುದರಿಂದ ದಿನಾಂಕ 22.01.2020 ರಂದು 5 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ನಿರ್ದೇಶಕರ ಫಲಿತಾಂಶ ಘೋಷಿಸಿರುವುದರಿಂದ ದಿನಾಂಕ 21.01.2025 ಚುನಾವಣಾ ದಿನಾಂಕವೆಂದು ಭಾವಿಸಿಕೊಂಡು ಸಹಕಾರ ಸಂಘಗಳ ಕಾಯ್ದೆ 1959 ನಿಯಮ 13 ಡಿ (2ಎ) ನಲ್ಲಿ ತಿಳಿಸಿದಂತೆ ಚುನಾವಣಾ ದಿನಾಂಕಕ್ಕೆ 195 ದಿನಗಳ ಮುಂಚಿತವಾಗಿ ಷೇರು ಬಾಕಿ ಉಳಿಸಿಕೊಂಡಿರುವ ಸದಸ್ಯರಿಗೆ ತಿಳುವಳಿಕೆ ಪತ್ರ ನೀಡುವುದು ಕಡ್ಡಾಯವಾಗಿರುತ್ತದೆ. ಪ್ರಯುಕ್ತ ಷೇರು ಬಾಕಿದಾರರಿಗೆ ಮತ್ತು ಸುಸ್ತಿ ಬಾಕಿದಾರರಿಗೆ ನೀಡಿರುವ ಈ ಪ್ರಕಟಣೆಯೇ ಕಲಂ 20 (2) (ಎ iv) ಮತ್ತು (ಎ v) ರ ಪ್ರಕಾರ ನೀಡಿದ ತಿಳುವಳಿಕೆ ಪತ್ರವಾಗಿರುತ್ತದೆ. ಸುಮಾರು ಸದಸ್ಯ ಬಾಂಧವರ ಬದಲಾದ ವಿಳಾಸವನ್ನು ಬ್ಯಾಂಕಿನಲ್ಲಿ ನೋಂದಣಿ ಮಾಡಿಕೊಳ್ಳದೇ ಇರುವುದರಿಂದ ಬ್ಯಾಂಕು ಜಾರಿ ಮಾಡುವ ಸೂಚನಾ ಪತ್ರಗಳು, ವಾರ್ಷಿಕ ಮಹಾಸಭೆಯ ಪುಸ್ತಕಗಳು ಅಂಚೆ ಇಲಾಖೆಯಿಂದ ವಾಪಾಸ್ ಆಗುತ್ತಿರುವುದರಿಂದ ಮಾನ್ಯ ಸದಸ್ಯ ಬಾಂಧವರು ತಮ್ಮ ಇತ್ತೀಚಿನ ಅಂಚೆ ವಿಳಾಸವನ್ನು ಬ್ಯಾಂಕಿನಲ್ಲಿ ನೋಂದಾಯಿಸಿಕೊಳ್ಳಲು ವಿನಂತಿ.


## 20ನೇ ವರ್ಷದ ಚಿರಸ್ಮರಣೆ



### ಶ್ರೀಯುತ ಹೊಳಲ್ ಬೊಮ್ಮಣ್ಣನವರು

ಜನನ : 12.01.1948 ಮರಣ 18.05.2004

ದಯೆ, ಅನುಕಂಪದ ಮನಸ್ಸು, ಪ್ರೀತಿ-ವಿಶ್ವಾಸದ ಮಾತು, ನಿಮ್ಮ ತ್ಯಾಗ, ಸರಳ, ಸಂಘರ್ಷ, ಜೀವನವೇ ನಮಗೆ ಮಾರ್ಗದರ್ಶನ.

ಸದಾ ನಿಮ್ಮ ಸ್ಮರಣೆಯಲ್ಲಿ.....

ಶ್ರೀಮತಿ ಚೇತನ ಬೊಮ್ಮಣ್ಣ ಮತ್ತು ಮಕ್ಕಳು
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು
ಮೆ|| ಹೊಳಲ್ ಬೊಮ್ಮಣ್ಣ & ಸನ್ಸ್ ಸಿಬ್ಬಂದಿ ವರ್ಗ ದಾವಣಗೆರೆ. ಫೋ. : 92422 35646

|| ಶ್ರೀ ಬೀರಲಿಂಗೇಶ್ವರ ಪ್ರಸನ್ನ || || ಶ್ರೀ ಸದದತ್ತಿ ರೇಣುಕಾ ಯಲ್ಲಮ್ಮದೇವಿ ಕೃಪೆ||

## 18ನೇ ವರ್ಷದ ಪುಣ್ಯಸ್ಮರಣೆ







### ದಿ|| ಶ್ರೀ ಕೆ.ಹೆಚ್.ಬಾಲಪ್ಪನವರು

ಪೂಜ್ಯರೇ...

ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳು ಕಳೆದಿವೆ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತ್ನಿ: ಶ್ರೀಮತಿ ಗಂಗಮ್ಮ

ಮಕ್ಕಳಾದ : ಶ್ರೀಮತಿ ಸವಿತಾ ಶ್ರೀ ಬಿ.ಲಿಂಗರಾಜ್,
• ಮಾಜಿ ನಿರ್ದೇಶಕರು, ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ, ದಾವಣಗೆರೆ • ಅಧ್ಯಕ್ಷರು ಜಿಲ್ಲಾ ಕುರುಬರ ಯುವ ಘಟಕ, ದಕ್ಷಿಣ ವಲಯ.
ಶ್ರೀಮತಿ ಪೂಜಾ ಶ್ರೀ ಬಿ.ಹನುಮೇಶ್

ಮೊಮ್ಮಕ್ಕಳಾದ: ಎಲ್.ಕೀರ್ತನ, ಹೆಚ್.ಹಾರ್ದಿಕ್, ಎಲ್.ಬಾಲರಾಜ್, ಹೆಚ್.ನವ್ಯ, ಎಲ್.ಕಿರಣ್ ಕುಮಾರ್

ಅಕ್ಕ ಮಾವಂದಿರಾದ:
ದಿ|| ಶ್ರೀಮತಿ ದುಗ್ಗಮ್ಮ ಮತ್ತು ಶ್ರೀ ಚಂದ್ರಪ್ಪ
ಶ್ರೀಮತಿ ವಸಂತಾ ಶ್ರೀ ಟಿ.ಬಸವರಾಜ್
ಶ್ರೀಮತಿ ಜ್ಯೋತಿ ಶ್ರೀ ವಿಜಯ ಹಾಗೂ ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು

"ಮನದಲ್ಲಿ ಕಪಟವಿಟ್ಟುಕೊಂಡು ಎಷ್ಟು ಜಪ ಮಾಡಿದರೇನು ಫಲ
ವೇದ ಶಾಸ್ತ್ರಗಳನ್ನೋದಿ ಬಾಯಾರಿದರೆ ಏನು ಫಲ.
ಹೊಳೆಯೊಳಗೆ ಮುಳುಗಿ ತಪ ಮಾಡಿದರೇನು ಫಲ.
ಮನದಲ್ಲಿ ಕಪಟವಿರುವಾಗ ಎಲ್ಲವೂ ನಿಷ್ಫಲ"
– ಭಕ್ತ ಕನಕದಾಸರು

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas